ಪಂಚಮ

ಸಂಪುಟ: ೩ ಜೂನ್ ೧೯೭೮ ಬೆಲೆ: ೨೫ ಪೈಸೆ ಸಂಚಿಕೆ: ೧

ಸವರ್ಣೀಯ ಜಮೀನ್ದಾರರಿಂದ

ದಾಸನಪುರದಲ್ಲಿ ದಲಿತನ ಅಮಾನುಷ ಕೊಲೆ

(ಪಂಚಮ ಪ್ರತಿನಿಧಿಯಿಂದ)

ಇಂಡಿಯಾದ ರಾಜಕಾರಣಿಗಳು ದಲಿತರ ಉನ್ನತಿಯ ಬಗ್ಗೆ ಬಹಳವಾಗಿ ಮಾತಾಡುತ್ತಿದ್ದಾರೆ. ಇತ್ತೀಚಿನ ರಾಜಕೀಯ ಬೆಳವಣಿಗೆ, ಬದಲಾವಣೆಗಳಿಂದ ಇದು ಇನ್ನೂ ಹೆಚ್ಚಾಗುತ್ತಿದೆ. ಅದರೊಟ್ಟಿಗೇ ದಲಿತರ ಮೇಲಿನ ದೌರ್ಜನ್ಯಗಳೂ ಅತಿಯಾಗುತ್ತಿವೆ. ಎಲ್ಲೆಂದರಲ್ಲಿ ಪ್ರತಿದಿನ ದಲಿತರ ಮೇಲೆ ದರೋಡೆ, ದೌರ್ಜನ್ಯ ಕೊಲೆ ಸುಲಿಗೆಗಳು ನಡೆಯುತ್ತಲೇ ಇವೆ.

ದಾಸನಪುರ ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನಲ್ಲಿರುವ ಒಂದು ಸಣ್ಣ ಹಳ್ಳಿ. ಅಲ್ಲಿ ಏಪ್ರಿಲ್ 6ರಂದು ದಲಿತ ಚಿಕ್ಕತಿಮ್ಮಯ್ಯನನ್ನು ಅಮಾನುಷವಾಗಿ ಕೊಲೆ ಮಾಡಲಾಯಿತು. ಅವನ ಗುಡಿಸಲನ್ನು ಭಸ್ಮ ಮಾಡಲಾಯಿತು

ನಡೆದದ್ದು ಹೀಗೆ

೩೫ರ ಹರೆಯದ ಚಿಕ್ಕತಿಮ್ಮಯ್ಯ ದಾಸನಪುರಕ್ಕೆ ಈಗ್ಗೆ ಐದು ವರ್ಷಗಳ ಹಿಂದೆ ಶ್ರೀಮತಿ ಜಯಮ್ಮ ಅವರನ್ನು ಮದುವೆಯಾಗಿ ಬಂದನು. ಈ ಹಿಂದೆ ಆತ ದೊಡ್ಡಬೀರನ ಕೆರೆ, ಮಾಯಸಂದ್ರಗಳಲ್ಲಿ ಸ್ವಲ್ಪ ಜಮೀನು ಇಟ್ಟುಕೊಂಡು ವಾಸಿಸುತ್ತಿದ್ದನು. ದಾಸನಪುರಕ್ಕೆ ಬಂದ ಮೇಲೆ ದೊಡ್ಡಬೀರನ ಕೆರೆಯಲ್ಲಿದ್ದ ಜಮೀನನ್ನು ಮಾರಿ ದಾಸನಪುರದಲ್ಲಿ ಜಮೀನು ಕೊಳ್ಳಲು ಪ್ರಯತ್ನ ನಡೆಸುತ್ತಿದ್ದನು. ಜೀವನಕ್ಕಾಗಿ ಸೌದೆ ಒಡೆಯುವ ಕೆಲಸ ಮಾಡುತ್ತಿದ್ದು ವಾರಕ್ಕೆ ೫೦ರಿಂದ ೬೦ ರೂ. ಸಂಪಾದಿಸುತ್ತಿದ್ದನು.

ಒಂದು ದಿನ ದಾಸನಪುರದ ನಿವಾಸಿ ತಿರುಂಗಿರಯ್ಯನ ಮಗ ತಿಮ್ಮರಾಯಪ್ಪನು ಚಿಕ್ಕತಿಮ್ಮಯ್ಯನಲ್ಲಿಗೆ ಬಂದು ತನ್ನ ಜಮೀನನ್ನು ಮಾರುವುದಾಗಿ ಹೇಳಿ ಹಣ ಪಡೆದು ಹೋದನು. ಸಾಕಷ್ಟು ದಿನ ಕಳೆದರೂ ತಿಮ್ಮರಾಯಪ್ಪನು ಜಮೀನು ಕೊಡುವುದರ ಬಗ್ಗೆಯಾಗಲಿ ಹಣ ವಾಪಸ್ಸು ಮಾಡುವುದರ ಬಗ್ಗೆಯಾಗಲಿ ಮಾತಾಡಲೇ ಇಲ್ಲ. ಚಿಕ್ಕತಿಮ್ಮಯ್ಯ ಈ ಬಗ್ಗೆ ಕುರಿತು ಅವನನ್ನು ಆಗಾಗ್ಗೆ ಕೇಳತೊಡಗಿದನು. ಇದು ಏಪ್ರಿಲ್ ೫ರಂದು ಜಗಳದಲ್ಲಿ ಕೊನೆಗೊಂಡಿತು.

ಮರಕ್ಕೆ ಬಿಗಿದರು

ಅದೇ ದಿನ ಸಾಯಂಕಾಲ ತಿಮ್ಮರಾಯಪ್ಪ ಮತ್ತು ಅವನ ಕಡೆಯ ಎಂಟು ಜನರು ರಂಗಯ್ಯ ಮತ್ತು ಅವನ ಇಬ್ಬರು ಮಕ್ಕಳಾದ ರಾಮು ಮತ್ತು ಲಿಂಗ, ಚಿಕ್ಕಾಂಜನೇಯನ ಮಕ್ಕಳಾದ ಚಿನ್ನಪ್ಪ ಮತ್ತು ಹನುಮಂತಯ್ಯ. ಮರಿಯಣ್ಣನ ಮಗ ಕರಿಹನುಮಯ್ಯ, ದೊಡ್ಡಾಂಜನೇಯನ ಮಗ ಹನುಮಂತ ಮತ್ತು ಖಾದರ್‌ಪೀರ್ ಸೇರಿ ಚಿಕ್ಕತಿಮ್ಮಯ್ಯನನ್ನು ಥಾರಾಮಾರಿ ಬಡಿದರು ಮೈಯಲ್ಲೆಲ್ಲ ರಕ್ತ ಸುರಿಯತೊಡಗಿತು. ಅರೆ ಪ್ರಜ್ಞೆಯಲ್ಲಿದ್ದ ಅವನನ್ನು ಹತ್ತಿರದಲ್ಲೇ ಇರುವ ಮರವೊಂದಕ್ಕೆ ಬಿಗಿದರು. ಚಿಕ್ಕತಿಮ್ಮಯ್ಯನಿಗೆ ಏಟು ಬಿದ್ದು ಪ್ರಜ್ಞೆ ತಪ್ಪಿದ್ದನ್ನು ತಿಳಿದ ಅವನ ಹೆಂಡತಿ ಜಯಮ್ಮ ಓಡಿ ಬಂದಳು. ಗಂಡನ ಸ್ಥಿತಿ ಕಂಡು ಅವಳ ಕರುಳು ಹಿಂಡಿದಂತಾಯ್ತು "ಬುಟ್ಬುಡಿ" ಅಂತ ಬೇಡಿಕೊಂಡಳು. ಆ ರಾಕ್ಷಸರು ಬಿಟ್ಟು ಹೊರಟುಹೋದರು.

(ಎರಡನೇ ಪುಟಕ್ಕೆ)



ಗಂಡನನ್ನು ಕಳೆದುಕೊಂಡ ಶ್ರೀಮತಿ ಜಯಮ್ಮ



ಚಿಕ್ಕತಿಮ್ಮಯ್ಯನ ಕೈಕಾಲು ಕತ್ತರಿಸಿದ ಸ್ಥಳ

ದಲಿತೋದ್ಧಾರದ ವೈಖರಿ!

ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ದಾಸನಪುರದಲ್ಲಿ ದಲಿತ ಹುಚ್ಚರಂಗಯ್ಯನ ಮಗ ವೆಂಕಟಯ್ಯ ಎಂಬುವನ ಹೆಸರಲ್ಲಿ ೭ ಎಕರೆ ೭ ಗುಂಟೆ ಫಲವತ್ತಾದ ಇನಾಮತಿ ಜಮೀನು ಇದೆ. ಈ ಬಗ್ಗೆ ತುಮಕೂರು ಉಪವಿಭಾಗದ ಅಸಿಸ್ಟೆಂಟ್ ಕಮೀಷನರ್ ಅವರ ಲಿಖಿತ ಆರ್ಡರ್ (ಸ್ಟೇ ಆರ್ಡರ್) ಸಹ ಇದೆ. ಆದರೆ ಜಮೀನಿನ ಒಡೆತನ ಮಾತ್ರ ಅದೇ ಊರಿನ ಜಮೀನ್ದಾರ ದಾಸೇಗೌಡನ ಅಧೀನದಲ್ಲಿದೆ. ಜಮೀನಿಗೆ ಕಂದಾಯ ಕಟ್ಟುವವನು ವೆಂಕಟಯ್ಯ ಆದರೆ ಬೆಳೆ ತೆಗೆದು ಬದುಕುವವನು ದಾಸೇಗೌಡ.

ಈಗ್ಗೆ ಏಳೆಂಟು ವರ್ಷಗಳಿಂದಲೂ ಇದು ಹೀಗೇ ನಡೆಯುತ್ತಿದೆ. ಜಮೀನು ಬಿಟ್ಟುಕೊಡಲು ಕೇಳಿದ ವೆಂಕಟಯ್ಯ ಮತ್ತು ಅವನ ಕುಟುಂಬದವರನ್ನು ದಾಸೆ ಗೌಡ ಮತ್ತು ಮನೆಯವರು ಬಡಿದು ಹೊರಗಟ್ಟಿದ್ದು ಉಂಟು. ಏಳು ಜನ ಹೆಣ್ಣು ಮಕ್ಕಳು ಮತ್ತು ಒಬ್ಬ ಮಗ ಎಲ್ಲಾ ಸಣ್ಣ ಸಣ್ಣ ಮಕ್ಕಳಿರುವ ದಲಿತ ವೆಂಕಟಯ್ಯ ಈ ಹಗಲು ದರೋಡೆ ಬಗ್ಗೆ ಪೋಲೀಸರಿಗೆ ಮತ್ತು ರೆವಿನ್ಯೂ ಅಧಿಕಾರಿಗಳಿಗೆ ನೀಡಿದ ಅಸಂಖ್ಯ ದೂರುಗಳಿಗೆ ಮಾತ್ರ ಯಾವ ಪ್ರತಿಕ್ರಿಯೆಯೂ ಇಲ್ಲ.

ಹೇಗಿದೆ ದಲಿತೋದ್ಧಾರದ ವೈಖರಿ!

ಸವರ್ಣೀಯ ಜಮೀನ್ದಾರರಿಂದ ದಾಸನಪುರದಲ್ಲಿ ದಲಿತನ ಅಮಾನುಷ ಕೊಲೆ

(ಒಂದನೇ ಪುಟದಿಂದ)

ಕೈಕಾಲು ಕತ್ತರಿಸಿದರು

ಸ್ವಲ್ಪ ಚೇತರಿಸಿಕೊಂಡ ಚಿಕ್ಕತಿಮ್ಮಯ್ಯ ಮಾರನೆಯ ದಿನ ಬೆಳಿಗ್ಗೆ ಪೋಲೀಸರಿಗೆ ದೂರು ಕೊಡುವೆನೆಂದು ಹೆಂಡತಿಗೆ ಹೇಳಿ ಹೋದನು. ಅವನು ದೂರು ನೀಡಿ ಹಿಂತಿರುಗಿದಾಗ ಸಂಜೆ ೫ ಗಂಟೆಯಾಗಿತ್ತು. ತಮ್ಮ ಮೇಲೆ ಪೋಲೀಸರಿಗೆ ದೂರು ನೀಡಿರುವುದನ್ನು ಹೇಗೋ ತಿಳಿದ ತಿಮ್ಮರಾಯಪ್ಪ ಮತ್ತು ಅವನ ಸಂಗಡಿಗರು ಕೂಡಲೇ ಅವನ ಮನೆಗೆ ಬಂದು ಅವನನ್ನು ಹೊರಗೆ ಬರುವಂತೆ ಕರೆದರು. ಚಿಕ್ಕತಿಮ್ಮಯ್ಯ ಬಾಗಿಲು ಹಾಕಿ ಹೊರಗೆ ಬರಲು ನಿರಾಕರಿಸಿದನು. ಕೆಲವರ ಕೈಯಲ್ಲಿ ಮಚ್ಚಿತ್ತು ಕೆಲವರ ಬಳಿ ದೊಣ್ಣೆಗಳಿದ್ದವು.

ಕೂಡಲೇ ಇವರೆಲ್ಲ ಅವನ ಗುಡಿಸಲ ಬಾಗಿಲನ್ನು ಮುರಿದು ಒಳನುಗ್ಗಿ ಅವನನ್ನು ದರದರನೆ ಹೊರಗೆಳೆದೊಯ್ದರು. ಇದನ್ನು ತಡೆಯಲೆತ್ನಿಸಿದ ಹೆಂಡತಿ ಮತ್ತು ಅವನ ಕಡೆಯವರನ್ನು ಕೊಲೆಗಡುಕರು ಚೆನ್ನಾಗಿ ಥಳಿಸಿ ಓಡಿಸಿದರು. ಚಿಕ್ಕತಿಮ್ಮಯ್ಯನನ್ನು ಅವನ ಮನೆಯಿಂದ ಸುಮಾರು ೮೦೦ ಗಜ ದೂರಕ್ಕೆ ಎಳೆದೊಯ್ದು ಅವನ ಕೈಕಾಲುಗಳನ್ನು ಕತ್ತರಿಸಿದರು. ಅವನ ಮೈಯನ್ನೆಲ್ಲ ಚೂರು ಚೂರು ಮಾಡಿದರು.

ಗುಡಿಸಲಿಗೆ ಬೆಂಕಿ

ಮಧ್ಯರಾತ್ರಿ ವೇಳೆಯಲ್ಲಿ ಕೊಲೆಗಡುಕರು ಚಿಕ್ಕತಿಮ್ಮಯ್ಯನ ಚೂರು ಚೂರು ದೇಹವನ್ನೆಲ್ಲ ಜೋಡಿಸಿ ತಂದು ಅವನ ಗುಡಿಸಿಲೊಳಗಿಟ್ಟು



ಚಿಕ್ಕತಿಮ್ಮಯ್ಯನೊಂದಿಗೆ ಭಸ್ಮವಾದ ಗುಡಿಸಲು

ಗುಡಿಸಲಿಗೆ ಬೆಂಕಿ ಹಚ್ಚಿ ಹೊರಟುಹೋದರು. ಚಿಕ್ಕತಿಮ್ಮಯ್ಯನ ಹೆಂಡತಿ ಮತ್ತವರ ಸಂಬಂಧಿಗಳು ಗೋಳೋ ಅಂತ ಜೋರಾಗಿ ಅಳತೊಡಗಿದರು. ಗಲಾಟೆ ಕೇಳಿ ಎದ್ದು ಬಂದ ಊರಿನ ಸವರ್ಣೀಯರು ಬೆಂಕಿ ಆರಿಸಿದರು. ಗುಡಿಸಲು ಸಂಪೂರ್ಣ ಭಸ್ಮವಾಗಿ ಹೋಗಿತ್ತು. ಗುಡಿಸಲೊಳಗೆ ಸತ್ತ ದೇಹವೊಂದಿರುವುದನ್ನು ಕಂಡ ಅವರೆಲ್ಲ ಹೆದರಿ ಓಡಿದರು.

ಶವಸಂಪೂರ್ಣ ಸುಟ್ಟುಹೋಗದಿರುವುದನ್ನು ತಿಳಿದ ಕೊಲೆಗಡುಕರು ಮತ್ತೆ ಬಂದರು. ಅದರ ಮೇಲೆ ಎಣ್ಣೆ ಸುರಿದು ಬೆಂಕಿ ಹಚ್ಚಿ ಅದ ಸಂಪೂರ್ಣ ಭಸ್ಮವಾಗುವವರೆಗೆ ಕಾದಿದ್ದು ನಂತರ ಹೊರಟುಹೋದರು.

ತಿರಸ್ಕೃತವಾದ ಅರ್ಜಿ

ಏ. ೮ರಂದು ಪಟೇಲ್ ತಿಮ್ಮೇಗೌಡರಿಂದ ಬಂದ ಕರೆ ಮೇರೆಗೆ ಜಯಮ್ಮ ಮತ್ತಿತರರು ಅಮೃತೂರು ಪೋಲೀಸ್ ಠಾಣೆಗೆ ದೂರು ನೀಡಲು ಹೋದಾಗ ಠಾಣೆಯಲ್ಲಿದ್ದ ಪೋಲೀಸರು ಅರ್ಜಿಯನ್ನು ತಿರಸ್ಕರಿಸಿದರು. ಮಾರನೆಯ ದಿನ ಜಯಮ್ಮ ಅವರ ಸಂಬಂಧಿಗಳು ಕುಣಿಗಲ್ ಠಾಣೆಗೆ ಹೋಗಿ ದೂರಿತ್ತರು. ಕೂಡಲೇ ಸರ್ಕಲ್ ಇನ್ಸ್‌ಪೆಕ್ಟರ್ ಅವರು ಸ್ಥಳಕ್ಕೆ ಧಾವಿಸಿ ತನಿಖೆ ಪ್ರಾರಂಭಿಸಿರುವರು. ಈ ಸಂಬಂಧವಾಗಿ ಆರು ಜನರನ್ನು ಬಂಧಿಸಿರುವುದಾಗಿ ಗೊತ್ತಾಗಿದೆ.

ಕ್ರಿಯಾಸಮಿತಿ ಒತ್ತಾಯ

ಬೆಂಗಳೂರಿನ ದಲಿತ ಕ್ರಿಯಾಸಮಿತಿ ಸಂಚಾಲಕ ಓ. ಶ್ರೀಧರನ್ ಅವರು ಈ ಬಗ್ಗೆ ಹೇಳಿಕೆಯೊಂದನ್ನು ನೀಡಿ ಚಿಕ್ಕತಿಮ್ಮಯ್ಯ ಏಪ್ರಿಲ್ ೬ರಂದು ನೀಡಿದ ದೂರಿನ ಮೇಲೆ ಸರಿಯಾದ ರೀತಿಯ ಕ್ರಮ ತೆಗೆದುಕೊಂಡಿದ್ದರೆ ಈ ಅಮಾನುಷ ಕೊಲೆ ನಡೆಯುವ ಅವಕಾಶ ಇರುತ್ತಿರಲಿಲ್ಲ. ಇದಕ್ಕೆ ಅಧಿಕಾರಿಗಳು ಪರೋಕ್ಷವಾಗಿ ಸಹಾಯ ಮಾಡುತ್ತಿದ್ದಾರೆ ಎಂದು ಆಪಾದಿಸಿದ್ದಾರೆ.

ದಲಿತರ ದೂರಿನ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳದೇ ಇರುವುದು ಸವರ್ಣೀಯರಿಗೆ ಒಂದು ಬಗೆಯ ಸಹಾಯ ನೀಡಿದಂತಾಗಿದೆ. ಇದರಿಂದಲೇ ದಲಿತನೊಬ್ಬನನ್ನು ಜೀವಸಹಿತ ಕೈಕಾಲು ಕತ್ತರಿಸಲು ಅವರಿಗೆ ಧೈರ್ಯ ಬಂದಿದೆ. ಎಂದು ತಿಳಿಸಿರುವ ಶ್ರೀಧರನ್ ಅವರು ಕೊಲೆಗಡುಕರನ್ನು ಕೂಡಲೇ ಬಂಧಿಸಿ ಅವರಿಗೆ ಶಿಕ್ಷೆ ವಿಧಿಸಬೇಕು ಮತ್ತು ಅಲ್ಲಿನ ದಲಿತರಿಗೆ ಸೂಕ್ತ ರಕ್ಷಣೆ ಒದಗಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ದಲಿತ ನುಡಿ

* ನಿಮ್ಮ ಜಾತಿಗಳ ಹೋರಾಟ ಕೇವಲ ಸಾಮಾಜಿಕವಾಗಿ ಕಾಣಿಸಿದರೂ ಅದು ವರ್ಗ ಹೋರಾಟವೂ ಹೌದು.
* ದೇಶದಲ್ಲಿನ ಅಧಿಕಾರವನ್ನು ತಮ್ಮ ಕೈಗೆ ತೆಗೆದುಕೊಳ್ಳುವುದಕ್ಕಾಗಿ ಬಲಹೀನ ವರ್ಗಗಳೆಲ್ಲ ಒಂದೇ ರಾಜಕೀಯ ಸಿದ್ಧಾಂತದ ವೇದಿಕೆಯ ಮೇಲೆ ನಿಂತು ಐಕ್ಯತೆಯಿಂದ ಪ್ರಬಲವಾದ ಹೋರಾಟ ನಡೆಸಬೇಕು.
* ಇಂಡಿಯಾದಲ್ಲಿ ಅಸ್ಪೃಶ್ಯರು ಗಾಂಧೀಜಿಯಂತಹ ಶತ್ರುವನ್ನು ಹಿಂದೆಂದೂ ಪಡೆದಿರಲಿಲ್ಲ.
* ಗಾಂಧೀಜಿಯವರು ತಮ್ಮ ಹರಿಜನೋದ್ಧಾರ ಕಾರ್ಯವನ್ನು ಕೊನೆಯ ಉಸಿರು ಬಿಡುತ್ತಿದ್ದ ಹಿಂದೂ ಧರ್ಮವನ್ನು ಉಳಿಸಲೆಂದೇ, ಅದನ್ನು ಒಂದು ರಕ್ಷಾಕವಚವಾಗಿ ಬಳಸಿದರೇ ಹೊರತು, ಸರ್ವಮಾನವ ಸಮಾನತೆಗಾಗಿ ಅಲ್ಲ.
* ಹಿಂದೂ ಧರ್ಮದ ದೈವಗ್ರಂಥಗಳು, ದೇವತೆಗಳು ನಿಮ್ಮನ್ನು ಅನೇಕ ಹೆಸರುಗಳಿಂದ, ನೀಚವಾದ ಪದಜಾಲಗಳಿಂದ, ಮಾನವೀಯತೆಯನ್ನು, ಆತ್ಮಾಭಿಮಾನವನ್ನು ನಿಂದಿಸಿ ಅವಮಾನಿಸಿರುವುದನ್ನು ಮರೆಯಬೇಡಿ. ಅದನ್ನು ಉಗ್ರವಾಗಿ ಖಂಡಿಸಬೇಕು. ಆ ದಿಕ್ಕಲ್ಲಿ ಇನ್ನು ನಿಮ್ಮ ಜೀವನ ಸಾಗಕೂಡದು.
* ಮಾನವೀಯತೆಗಾಗಿ, ಆತ್ಮಾಭಿಮಾನಕ್ಕಾಗಿ ನಿರಂತರವಾಗಿ ಸಾಗುವ ಸಮರದಲ್ಲಿ ನೀವು ಸಾವನ್ನಪ್ಪಿದರೆ ನಿಮ್ಮ ಕೂಲಿ, ಗುಲಾಮತನ, ಅಸ್ಪೃಶ್ಯತೆ, ಹಸಿವು ಎಲ್ಲವೂ ಸುಟ್ಟು ಹೋಗುತ್ತವೆಯೇ ಹೊರತು ಇದರಿಂದ ನಿಮಗಾಗುವ ನಷ್ಟವೇನೂ ಇಲ್ಲ.

—ಡಾ॥ ಬಿ. ಆರ್. ಅಂಬೇಡ್ಕರ್

ಪ್ರತಿಕ್ರಿಯೆ

'ಪಂಚಮ'ದಲ್ಲಿ ಪ್ರಕಟವಾದ ಎಲ್ಲಾ ಬಗೆಯ ಲೇಖನಗಳ ಮೇಲಿನ ವಾಚಕರ ಪ್ರತಿಕ್ರಿಯೆಗೆ ಈ ಅಂಕಣದಲ್ಲಿ ಅವಕಾಶವುಂಟು. ಆದಷ್ಟು ಚಿಕ್ಕದಾಗಿ ಸ್ಫುಟವಾಗಿ ಬರೆದು ಕಳುಹಿಸಿ. ವಿಳಾಸ ಇಲ್ಲದ ಬರಹಗಳಿಗೆ ಪ್ರಕಟಣೆಯ ಅವಕಾಶವಿರುವುದಿಲ್ಲ.

—ಸಂಪಾದಕ

ಹತ್ತೂ ಸುತ್ತಿನಿಂದ

ಹುಸ್ಕೂರಿನ ಸಮಸ್ಯೆಗಳು

ಬೆಂಗಳೂರು ಜಿಲ್ಲೆ ಆನೇಲ್ ತಾಲ್ಲೂಕಿನಲ್ಲಿ ಹುಸ್ಕೂರು ಎನ್ನುವ ಹಳ್ಳಿಯೊಂದಿದೆ. ಇದು ಬೆಂಗಳೂರಿಂದ ಕೆಲವೇ ಮೈಲಿಗಳಷ್ಟು ಅಂತರದಲ್ಲಿದೆ. ಸುಮಾರು ಮುನ್ನೂರು ನಾನೂರು ಮನೆಗಳಿರುವ ಈ ಊರಿನಲ್ಲಿ 60–70 ಪಕ್ಕಲು ದಲಿತರಿದ್ದಾರೆ.

ಇಲ್ಲಿ ಕುಡಿಯುವ ನೀರಿನ ನಾಲ್ಕು ಬಾವಿಗಳಿದ್ದು ಅವುಗಳೆಲ್ಲ ಸವರ್ಣೀಯ ಹಿಂದೂಗಳ ಹಿಡಿತದಲ್ಲಿವೆ. ದಲಿತರಿಗೆ ಅಲ್ಲಿ ಅವಕಾಶವಿಲ್ಲ. ಉರಿಬಿಸಿಲಿನಲ್ಲಿ ಕುಡಿಯುವ ನೀರಿಗೆ ದಲಿತರು ಮೈಲಿಗಟ್ಟಲೆ ಹೋಗಬೇಕು. ಊರಲ್ಲಿರುವ ನಾಲ್ಕು ಬಾವಿಗಳಲ್ಲಿ ಸಮೃದ್ಧವಾಗಿ ನೀರು ದೊರೆಯುತ್ತಿದ್ದರೂ ಅಲ್ಲಿ ದಲಿತರು ನೀರು ತೆಗೆಯುವ ಹಾಗಿಲ್ಲ.

ಸರ್ಕಾರದವರು ದಲಿತರಿಗಾಗಿ ಕಟ್ಟಿಸಿಕೊಟ್ಟ ಜನತಾ ಮನೆಗಳು ಹೆಂಚು ಕಾಣುವ ಮೊದಲೇ ನೆಲ ಕಂಡಿವೆ. ಬೀದಿಯಲ್ಲಿ ವಿದ್ಯುತ್ ಕಂಬಗಳು ಎದ್ದುನಿಂತಿದ್ದರೂ ರಾತ್ರಿ ಅಲ್ಲಿ ದೀಪಗಳೇ ಇರುವುದಿಲ್ಲ. ಆದರೆ ಕಂದಾಯ ಮಾತ್ರ ವಸೂಲು ಮಾಡುತ್ತಾರೆ.

ಇಲ್ಲಿ ವರ್ಷಕ್ಕೊಮ್ಮೆ ಗ್ರಾಮದೇವತೆ ಮುದ್ದೂರಮ್ಮನ ಜಾತ್ರೆ ನಡೆಯುತ್ತವೆ. ಆಗ ಅಮಾನುಷವಾಗಿ ಪ್ರಾಣಿಗಳ ಬಲಿ ಕೊಡಲಾಗುತ್ತದೆ. ದಲಿತ ಮಕ್ಕಳಿಗೆ ಸಿಡಿ ಚುಚ್ಚಲಾಗುತ್ತದೆ. ಹತ್ತಾರು ಕೋಣಗಳನ್ನು ಕಡಿಯಲಾಗುತ್ತದೆ. ಈ ಎಲ್ಲಾ ಕೆಲಸವನ್ನು ದಲಿತರಿಂದಲೇ ಮಾಡಿಸುತ್ತಾರೆ.

ದಲಿತೋದ್ಧಾರದ ಬಗ್ಗೆ ಪತ್ರಿಕೆ ಮತ್ತು ರೇಡಿಯೋಗಳಲ್ಲಿ ಮಾತಾಡುವ ರಾಜಕಾರಣಿಗಳು ಇಂಥ ಅಮಾನುಷ ಕೃತ್ಯಗಳ ಕಡೆಗೆ ಗಮನ ಹರಿಸಿದರೆ ಒಳ್ಳೆಯದೆನಿಸುತ್ತದೆ ದಲಿತರಿಗೆ ಕೂಡಲೇ ಕುಡಿಯುವ ನೀರಿನ ವ್ಯವಸ್ಥೆ, ಸರಿಯಾದ ಮನೆಗಳ ನಿರ್ಮಾಣ ಮಾಡಿ ಜಾತ್ರೆಯಲ್ಲಿ ನಡೆಯುವ ಕ್ರೂರ ಕೃತ್ಯಗಳನ್ನು ನಿಲ್ಲಿಸುವತ್ತ ಸರ್ಕಾರ ಗಮನ ಹರಿಸಬೇಕೆಂದು ಕೇಳುತ್ತೇನೆ.

—ಹೆಚ್. ಎಂ. ಕೃಷ್ಣಪ್ಪ

ಹುಸ್ಕೂರು, ಆನೇಕಲ್ ತಾ॥

ಕ್ರೂರ 'ಸಿಡಿ' ಪದ್ಧತಿ

ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲ್ಲೂಕು, ಅಜಂಪುರ ಗ್ರಾಮದಲ್ಲಿ ಬಹಳ ವರ್ಷಗಳಿಂದ ಗ್ರಾಮದೇವತೆ ಕಿರಾಳಮ್ಮನ 'ಸಿಡಿ' ನಡೆಯುತ್ತದೆ. ಅಂದು ಧರ್ಮದ ಹೆಸರಿನಲ್ಲಿ ಹರಿಜನ ಮಹಿಳೆಯರಿಗೆ ಕ್ರೂರ ಹಿಂಸೆ ಕೊಡಲಾಗುತ್ತದೆ.

ಸಿಡಿ' ಆಡುವ ಸ್ತ್ರೀ ಅಥವ ಪುರುಷರ ಬೆನ್ನಿನ ಮೇಲೆ 3–4 ಇಂಚಿನ ಉದ್ದದ ಬೆಳ್ಳಿಯ ದಬ್ಬಳದಿಂದ ಚುಚ್ಚಲಾಗುತ್ತದೆ. ನಂತರ 'ಸಿಡಿಗಂಟ'ನ್ನು ಸುಮಾರು 20 ಅಡಿ ಎತ್ತರಕ್ಕೆ ಏರುವ ಏತದಂತಹ ಕಂಬಕ್ಕೆ ಕಟ್ಟಿ ತಿರುಗಿಸುತ್ತಾರೆ. ಮತ್ತು ಸ್ವಲ್ಪ ದೂರ ತೇರು ಎಳೆದಂತೆ ಎಳೆಸುತ್ತಾರೆ.

ಈ ದುಷ್ಟ ಪದ್ಧತಿ ಕರ್ನಾಟಕದ ಹಲವಾರು ಕಡೆ ನಡೆಯುತ್ತಿದೆ. ಇದಕ್ಕೆ ಕೇವಲ ಹರಿಜನರನ್ನು ಮಾತ್ರ ಉಪಯೋಗಿಸುತ್ತಾರೆ. ಅಸಹ್ಯ ಹುಟ್ಟಿಸುವ ವಿಷಯವೆಂದರೆ ಹರಿಜನರನ್ನು 'ಸಿಡಿ' ಆಡಲು ಉಪಯೋಗಿಸುತ್ತಾರೆ ಆದರೆ ಅವರನ್ನು ದೇವಾಲಯದೊಳಕ್ಕೆ ಹೋಗಗೊಡುವುದಿಲ್ಲ.

ಇಂತ ಅಮಾನುಷ ಕ್ರೂರ ಪದ್ಧತಿ ನಿಲ್ಲಬೇಕು. ಇದಕ್ಕಾಗಿ ಎಲ್ಲ ಕಡೆಯ ದಲಿತ ಸಮಿತಿಗಳೂ ಕೆಲಸ ಮಾಡಬೇಕು. ಹರಿಜನರಲ್ಲಿ ತಿಳುವಳಿಕೆ ಬರುವಂತೆ ಮಾಡಿ ಇಂಥ ಹಿಂಸೆಗೆ ಒಳಗಾಗದಂತೆ ಮಾಡಬೇಕು.

—ಎಂ. ಡಿ. ಗಂಗಯ್ಯ

ಚಿಕ್ಕಮಗಳೂರು

● ಹರಿಜನರ ಮೇಲಿನ ದೌರ್ಜನ್ಯ ನಿಲ್ಲದಿದ್ದರೆ ಉಪವಾಸ ಸತ್ಯಾಗ್ರಹ ಕೈಗೊಳ್ಳುವೆ.

—ಪ್ರಧಾನಿ ಮೊರಾರ್ಜಿ ದೇಸಾಯಿ

● ಹರಿಜನರ ಉದ್ಧಾರ ಐದು ವರ್ಷಗಳಲ್ಲೇ ಆಗಿಬಿಟ್ಟರೆ ಮುಂದೆ ಬರುವ ಶಾಸಕರು ವಿಧಾನಸಭೆಯಲ್ಲಿ ಇಸ್ಪೇಟು ಆಡಬೇಕೆ?

—ಕೆ. ಪ್ರಭಾಕರ್

● ನಿಮ್ಮ ಹೆಸರಿನಲ್ಲಿ ಅಧಿಕಾರ ಗಳಿಸಿಕೊಂಡು ನಾವು ಸುಖವಾಗಿದ್ದೇವೆ. ನಿಮ್ಮ ಉದ್ಧಾರಕ್ಕೆ ಹೇಳಿಕೊಳ್ಳುವಂತ ಕೆಲಸವೇನನ್ನು ನಾವು ಇನ್ನೂ ಮಾಡಿಲ್ಲ.

—ಕೆ. ಎಚ್. ರಂಗನಾಥ್

● ಹರಿಜನರ ಮೇಲಿನ ದೌರ್ಜನ್ಯ ತಡೆಗಟ್ಟಲು ವಿಫಲವಾಗಿರುವ ಭಾರತ ದಕ್ಷಿಣ ಆಫ್ರಿಕಾದ ನೀಗ್ರೋಗಳ ಬಗ್ಗೆ ಮಾತನಾಡುತ್ತಿದೆ. ಇನ್ನಾದರೂ ಹರಿಜನರ ಮೇಲಿನ ದೌರ್ಜನ್ಯ ತಡೆಗಟ್ಟಲು ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಇಷ್ಟರಲ್ಲೇ ಈ ಸಮಸ್ಯೆಯನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದು ಭಾರತದ ಯೋಗ್ಯತೆಯನ್ನು ಪ್ರಶ್ನಿಸುವೆ.

—ರಾಮಧನ್

● ದೇಶದ ಒಟ್ಟು ಜನಸಂಖ್ಯೆಯಲ್ಲಿ ನಾವು ಹೆಚ್ಚಾಗಿದ್ದೇವೆ. ಇದು ಬಹುಮತದ ಕಾಲ. ಬಹುಮತವೇ ಪ್ರಧಾನ ಆದ್ದರಿಂದ ನಾವೇ ಎಲ್ಲರಿಗಿಂತ ಹೆಚ್ಚೆಂದು ತಿಳಿಯೋಣ.

—ಜಗಜೀವನರಾಂ

● ಒಂದೊಂದು ಸ್ಥಾನಗಳನ್ನು ಕೊಟ್ಟುಬಿಟ್ಟರೆ ಹರಿಜನರ ಉದ್ಧಾರವಾಗಲಿಲ್ಲ. ಈ ಕೆಟ್ಟ ರಾಜಕೀಯವನ್ನು ಎಲ್ಲಾ ಪಕ್ಷಗಳು ಇನ್ನಾದರೂ ಬಿಡಬೇಕು. ಹರಿಜನರನ್ನು ಜಾಗೃತಗೊಳಿಸಿ ಸಂಘಟನೆ ಮಾಡಬೇಕು.

—ಉಮಾಕಾಂತ ಬೋರ್ಕರ್

ಮಾನ್ಯರೇ,

ಪಂಚಮ' ಆರ್ಥಿಕ ಕಾರಣಗಳಿಂದಾಗಿ ಈವರೆಗೆ ಬರಲಿಲ್ಲ ಓದುಗರಿಗೆ ಈ ಬಗ್ಗೆ ಹೆಚ್ಚಿನ ವಿವರಣೆ ಕೊಡಬೇಕಿಲ್ಲ ಎಂದುಕೊಂಡಿದ್ದೇವೆ. ಇನ್ನು ಮುಂದೆ ಪಂಚಮ' ಪ್ರತಿತಿಂಗಳು ನಿಯಮಿತವಾಗಿ ನಿಮ್ಮ ಕೈ ಸೇರುವಂತೆ ಮಾಡಲು ಪ್ರಯತ್ನಿಸುತ್ತೇವೆ. ನಿಮ್ಮೆಲ್ಲರ ಸಹಕಾರ, ಬೆಂಬಲ, ಸಹಾಯ ಅತ್ಯಗತ್ಯ.

★ ಇದು ಯಾವ ರಾಜಕೀಯ ಪಕ್ಷಕ್ಕೂ ಪಕ್ಷಕ್ಕೂ ಬದ್ಧವಾಗಿಲ್ಲ.

★ ಎಲ್ಲ ಬಗೆಯ ಆರ್ಥಿಕ, ಧಾರ್ಮಿಕ ಸಾಮಾಜಿಕ, ಬೌದ್ಧಿಕ ದಬ್ಬಾಳಿಕೆಯ ವಿರುದ್ಧ ಶೋಷಣೆಯ ವಿರುದ್ಧ ದಲಿತರಲ್ಲಿ ಪ್ರಜ್ಞೆ ಮೂಡಿಸಲು ಯತ್ನಿಸುತ್ತದೆ.

ಪಂಚಮ

★ ದಲಿತರು ತಮ್ಮ ಬಗ್ಗೆ ಮತ್ತು ಸಮಾಜದ ಬಗ್ಗೆ ವೈಜ್ಞಾನಿಕವಾಗಿ ವಿವೇಚಿಸುವಂತೆ ಮಾಡುವ ಉದ್ದೇಶ ಇಟ್ಟುಕೊಂಡಿದೆ.

★ ವಿವಿಧ ಪ್ರಗತಿಪರ ಸಿದ್ಧಾಂತಗಳನ್ನು ದಲಿತರಿಗೆ ತಲುಪಿಸಿ ಅವರನ್ನು ವಿಚಾರಶೀಲರನ್ನಾಗಿಸಲು ಪ್ರಯತ್ನಿಸುತ್ತದೆ.

★ ದಲಿತರ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ರಚನಾತ್ಮಕವಾಗಿ ಅವರನ್ನು ಕ್ರಿಯಾಶೀಲರಾಗಿಸಲು ಶ್ರಮಿಸುತ್ತದೆ.

ಜೂನ್ ೧೯೭೮ — ಪಂಚಮ ಬಳಗ

ಭೋಜಪುರದಲ್ಲಿ ಜನಜಾಗೃತಿ: ದಲಿತರಿಗೊಂದು ಪ

ಭೋಜಪುರದ ಹೆಸರು ಕೇಳಿದಾಕ್ಷಣ, ಒಬ್ಬ ಕೆಂಗಣ್ಣಿನಿಂದ ಬೆಂಕಿಕಾರುತ್ತ ಬಂದೂಕ ಹಿಡಿದ 'ದುಸ್ಸಾಹಸಿ' ಬಡವನ ನೆನಪಾಗುತ್ತದೆ. ಅವನನ್ನು ತಿರಸ್ಕರಿಸುವುದು ಬಹಳ ಸುಲಭ. ಹಾಗಾದರೆ ನೀವು ಅವನ ಹತ್ತಿರ ಹೋಗಿ ಅವನ ಹೃದಯದ ಗಾಯವನ್ನು ತಿಳಿಯುವುದರಲ್ಲಿ ವಿಫಲರಾಗಿದ್ದೀರಿ.

ಈ ಮನುಷ್ಯ ಸ್ಮಶಾನದಿಂದೆದ್ದು ಭೂಸ್ವಾಮಿ ಪದ್ಧತಿಯ ರೆಂಬೆಗಳನ್ನು ಸಿಟ್ಟಿನಿಂದ ಕೊಚ್ಚುತ್ತಿದ್ದಾನೆ. 2,500 ವರ್ಷಗಳ ಈ ಜೀವವು ಇಲ್ಲಿಯೇ ನೆಲಕ್ಕೊರಗುವುದನ್ನ ನೋಡಬೇಕೆಂದು ಇವನ ಆಸೆ. ಇಲ್ಲಿಯವರೆಗೆ ಅವನನ್ನು ಅವಮಾನಗೊಳಿಸಿ ಕೊಡೆದು ಕೊಂಡು ಅವನಿಗೆ ಮನುಷ್ಯತ್ವವನ್ನು ನಿರಾಕರಿಸಿ, ಅವನ ಹೆಂಡತಿಯನ್ನು ಸೂಳೆಯನ್ನಾಗಿ ಮಾಡಿತ್ತು ಈ ವ್ಯವಸ್ಥೆ.

ಒಂದು ದಿನ ಅವನಿಗೆ ಯಾರೋ ನಕ್ಸಲ್‌ಬಾರಿಯ ಸುದ್ದಿಯನ್ನು ತಂದರು. ಅಲ್ಲಿಂದೀಚೆಗೆ ವಿಷಯ ಬದಲಾಗುತ್ತಲೇ ಇತ್ತು. ಸತ್ತ ಹರಿಜನನಿಂದ ಹುಟ್ಟಿದ ಜ್ವಾಲೆಯಿಂದಾಗಿ ಕೇರಿ ಕೇರಿಗಳಲ್ಲಿ ಹೊಸ ಮನುಷ್ಯ ಹುಟ್ಟಿದ. ಇವನು ತಾನು ಹರಿಜನನು ಅಲ್ಲ, ಆದರೆ ಮನುಷ್ಯ ಎಂದು ತಿಳಿದ. ಭೋಜಪುರದ ಪೋಲೀಸ್ ಸೂಪರಿಂಟೆಂಡೆಂಟ್‌ನ ಪ್ರಕಾರ 'ಸಾವಿರ ಜನರ ಗುಂಪಿನಲ್ಲಿ ನಕ್ಸಲೀಯನನ್ನು ಅವನ ಉರಿಗಣ್ಣಿನಿಂದ ಪತ್ತೆಹಚ್ಚಬಹುದು' ಎಂದು ಹೇಳುವ ಮಾತಿನರ್ಥ ಇದೇ.

ಹೊಸದೇವರು

ಭೋಜಪುರದಲ್ಲಿ ದೇವರ ಮೇಲಿನ ನಂಬಿಕೆ ಅಳಿದು ಹೊಸ ಪರಂಪರೆ ಸುಪ್ತವಾಗಿ ಬೆಳೆಯಿತು. 1973 ಮೇನಲ್ಲಿ ಚೌರಿ ಎಂಬ ಹಳ್ಳಿಯಲ್ಲಿ ಭೂ ಸ್ವಾಮಿಗಳು ಲೂಟಿ ಮಾಡಿದ ನಂತರ, ಪೋಲೀಸರು ನಾಲ್ವರು ಭೂರಹಿತರನ್ನು ಕೊಂದರು. ಮಾರನೆಯ ದಿನ ಅಲ್ಲಿಗೆ ಹೋದ ಪತ್ರಕರ್ತನ ಮುಂದೆ ಹರಿಜನ ಕೇರಿಯ ನಿವಾಸಿಯೊಬ್ಬ ಹೀಗೆ ಹೇಳಿದ್ದ, 'ಚಾರುಮಜುಮ್‌ದಾರ್ ಹೇಳೋದು ಸರಿ ಅನ್ನಿಸುತ್ತದೆ. ಈ ಪರಂಪರೆ ಪ್ರಾರಂಭವಾಗಿ ಬಹಳ ಕಾಲವಾಗಿತ್ತು. ಭೋಜಪುರದಲ್ಲಿ ಅನಕ್ಷರಸ್ಥರ ಮಧ್ಯೆಯೂ ರಾಮಾಯಣ ಬಹಳ ಜನಪ್ರಿಯವಾಗಿತ್ತು. ಪ್ರತಿಯೊಬ್ಬರೂ ಎಲ್ಲಾ ಸಂದರ್ಭಗಳಲ್ಲೂ ಶ್ರೀರಾಮ ಹೇಳಿದ್ದು ಅಥವ ಮಾಡಿದ್ದ ಆಧಾರದ ಮೇಲೆ ವಿವರಿಸುತ್ತಿದ್ದರು. ಈ ಹೊಸ ಮನುಷ್ಯ ಲೆನಿನ್ ಮಾವೊ ಮತ್ತು ಚಾರುಮಜುಮ್‌ದಾರರಲ್ಲಿ ಹೊಸ ದೇವರನ್ನು ಕಂಡ. ಅವನಿಗೆ ಈ ಹೊಸ ಭಾಷೆಯನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗಲಿಲ್ಲ. ಚಾರುಮಜುಮ್‌ದಾರರ ಮಾರ್ಗ, ಹವಲ್‌ದಾರ್‌ಸಿಂಗ್ ಅಥವ ಒಬ್ಬ 'ದಯಾಳು' ರೊಯ್‌ನನ್ನು ಕೊಲ್ಲುವುದು. ಭೋಜಪುರದ ಹೊಸ ಮನುಷ್ಯ ಈ ನಾಯಕರು ಹೇಳಿದ್ದು ಅಥವ ಬರೆದಿದ್ದರ ವಿವರಕ್ಕೆ ಹೋಗಬೇಕಾಗಿರಲಿಲ್ಲ. ಅವನು ಮಾರ್ಕ್ಸ್‌ವಾದದ ತಿರುಳನ್ನು ಅರಗಿಸಿಕೊಂಡಿದ್ದ.

ಪರಿಷ್ಕರಣವಾದ

ಪ್ರಪಂಚ ಭೋಜಪುರದಲ್ಲಿನ ನಕ್ಸಲೀಯ ಚಳುವಳಿ 1971ರಲ್ಲಿ ಗೊತ್ತಾಯಿತು ಅಲ್ಲಿಂದೀಚೆಗೆ ತೀವ್ರವಾಗಿ ಬೆಳೆಯುತ್ತಾ ಹೋಯಿತು. 'ಎಡದುಸ್ಸಾಹಸೀ' ಎಂದು ಚಾರುಮಜುಮ್‌ದಾರರನ್ನು ಆರೋ

ಮೂಲ: ಅರುಣ ಸಿನ್ಹ (ಫ್ರಾಂಟಿಯರ್)
ಕನ್ನಡಕ್ಕೆ: ಡಾ॥ ವಿ. ಲಕ್ಷ್ಮೀನಾರಾಯಣ

ಪಿಸಿದಾಗ ಸಿ.ಪಿ.ಐ. (ಎಮ್. ಎಲ್.)ನ ಹಲವಾರು ನಾಯಕರು ಕ್ರಾಂತಿ ಪಕ್ಷವನ್ನು ಬಿಟ್ಟಿದ್ದರು. ಪ್ರಭುತ್ವದ ಭಯಂಕರ ಹಿಂಸೆಯಿಂದಾಗಿ ಗೊಂದಲ ಗೊಂಡ ಚಳವಳಿ ಒಡೆಯಿತು. ಆದರೆ ಭೋಜಪುರದ ಹೊಸ ಮನುಷ್ಯ ಅಲುಗಾಡಲಿಲ್ಲ. ಒಮ್ಮೆ ಎಚ್ಚೆತ್ತ ನಂತರ ಅವನನ್ನು ತಡೆಯಲಾಗ

ಲಿಲ್ಲ. ಭೋಜಪುರದ
ಸತ್ಯನಾರಾಯಣಸಿಂಗ್
ಎಂದು ಕರೆಯಲ್ಪಟ್ಟ
'ಪರಿಷ್ಕರಣವಾದ' ಎ
ತೋರಿಸುವುದೆಂದು ಸ್ಪ
ಸತ್ಯನಾರಾಯಣಸಿಂಗ್
ಮರೆಯಿತು.

ಮಜುಮ್‌ದಾರ್-ಸಿ
ಗುವ ಹೊತ್ತಿಗೆ ಜ
ಎಂಬ ಅರ್ರಾದ ಎ
ಹೈಸ್ಕೂಲ್‌ನ ಉಪಾಧ್ಯ
ಮಟ್ಟದ ನಾಯಕತ್ವಕ್ಕೆ
ಬ್ಲಾಕ್‌ನ ಎಕ್ವಾರೀ
ನೊಬ್ಬನ ಮಗನಾಗಿದ್ದ
30ನೇ ವಯಸ್ಸಿನವ
ಕಮ್ಯುನಿಸ್ಟ್ ಪಕ್ಷದ
ಆತ ತನ್ನ ಮೊದಲನೆಯ
ವನ್ನು ನಕ್ಸಲ್‌ಬಾರಿಯ
ಪಡೆದ. ಈ ಶಾಲಾ
ಭೋಜಪುರದ ಚಳವ
ಪರಿವರ್ತನೆ ಹೊ
ಗಮನಾರ್ಹ

ನಕ್ಸಲ್‌ಬಾರಿ

1967 ಫೆಬ್ರವರಿ
ಸಹಾರ್ ವಿಸಲೂ (
ಬಿಹಾರ್ ವಿಧಾನಸ
ಸಾರ್ವತ್ರಿಕ ಚು
ಮುಖ್ಯವಾಗಿ ಹೋರ
ಲಿಸ್ಟ್ ಪಕ್ಷದ ರಾ
ಜಾತಿಯ ಭೂ ಸ್ವಾಮಿ
ಸಲ್ಪಟ್ಟವನು) ಮತ್ತು
ರಾವ್ (ಸಿ.ಪಿ.ಐ.) ಜ
ಎಕ್ವಾರೀ ಹಳ್ಳಿಯ ಮ
ಕೆಳಜಾತಿಯ ರೈತ ಮ
ಬೆಂಬಲಿಸಲ್ಪಟ್ಟಿದ್ದ.
ಎಕ್ವಾರಿ ಹಳ್ಳಿಯಲ್ಲಿ
ಭೂ ಸ್ವಾಮಿಗಳು ಮತ
ನಡುವೆ ತೀವ್ರವಾದ
ಸಿತ್ತು. ಜಗದೀಶ್ ವ
ಅಭ್ಯರ್ಥಿಗೆ ಚೆನ್ನಾಗಿ
ಕೆಲವರ್ಷಗಳಿಂದ
ರೈತರಿಗೆ ತಾವು ತಲೆ ಎ

ಎಚ್ಚರಿಕೆ! ಬರುತ್ತಿದ್ದಾರೆ 'ಕ್ರಾಂತಿ'ಕಾರಿಗಳು!!

ಅಣ್ಣ ತಮ್ಮಂದಿರೆ, ಅಕ್ಕ ತಂಗಿಯರೆ
ಬಂಧು ಬಾಂಧವರೆ ಮಿತ್ರರೆ,
ಎಚ್ಚರಿಕೆ ಬರುತ್ತಿದ್ದಾರೆ 'ಕ್ರಾಂತಿ'ಕಾರಿಗಳು.

ಆಳಿದ ಚರಿತೆಯ ಅಂಗರಕ್ಷಕರು
ಉದ್ಧಾರದ ಹೆಸರೇಳುವ ಭಕ್ಷಕರು
ಡೋಲು ಬಡಿಯುತ್ತ ವಾಲಗ ಊದುತ್ತ
ನಾವು ಒಂದಕ್ಕೂ ಕೂರದಂತೆ
ಎರಡಕ್ಕೂ ಕೂರದಂತೆ, ನಮ್ಮ ಕಿವಿ
ತಮ್ಮಟೆಗೆ ಬಡಿಯುತ್ತ ಬರುತ್ತಿದ್ದಾರೆ.

ವಾಲಗ ಊದಿ ಗಂಟಲೊಣಗಿ ಈಗ
ಕಪ್ಪು ಚೆಲ್ಲಿ ಬರೆಯುತ್ತ ನಮ್ಮ
ಮಯ್ಗೆಲ್ಲ ಮಸಿ ಬಳಿದು ಕೂರಿಸುತ್ತ
ಪ್ರತ್ಯಕ್ಷ ಕತ್ತ ಕಿವುಚಿ
ನವುರಾಗಿ ಗುಂಡಿಗೆ ತಳ್ಳುತ್ತ
ಸರದಾಡಿ ಗುದುಗಾಡಿ ಬರುತ್ತಿದ್ದಾರೆ.

ಗಮ್ಮತ್ತಾಗಿ ತಿರುಗುತ್ತ ಸವಲತ್ತುಗಳ
ಸರಮಾಲೆ ತೊಡಿಸುತ್ತ ನೀನು ಸೆಡ್ಯೂಲು.
ನೀನು ಬ್ಯಾಕ್ವರ್ಡು ಅಂತ ಏಟಿಹಾಕುತ್ತಿದ್ದಾರೆ
ಮೀಟಿಂಗುಮಾಡಿ ಈಟಿಂಗು ಮಾಡಿ
ಗಡದ್ದಾಗಿ ನಿದ್ದೆ ಮಾಡಿ
ಮರೆತಂತೆ ಗಕ್ಕನೆದ್ದು ಬರುತ್ತಿದ್ದಾರೆ.

ಎಲ್ಲಿ ನೋಡಿದರಲ್ಲಿ ಇವರದೇ ರಾಗ
ಹಾರುವ ಏರೋಪ್ಲೇನಿನಲ್ಲಿ
ಓಡುವ ರೈಲಿನಲ್ಲಿ ಕಾರಿನಲ್ಲಿ
ರೇಡಿಯೋ, ಮೈಕು ಸಿನೆಮಾದಲ್ಲಿ
ಗಲ್ಲಿಗಲ್ಲಿಗಳಲ್ಲಿ ಅಲ್ಲಿ ಇಲ್ಲಿ
ಎಲ್ಲೆಲ್ಲೂ ಒಡೆದ ನೆತ್ತರ
ಕೋಡಿಯಲ್ಲಿ ಮೀಯುತ್ತಿದ್ದಾರೆ
ದಲಿತೋದ್ಧಾರ ಹಾಡಿಬರುತ್ತಿದ್ದಾರೆ.

ಆದ್ದರಿಂದ ಎಚ್ಚರಿಕೆ !
ಅಣ್ಣ ತಮ್ಮಂದಿರೆ ಅಕ್ಕತಂಗಿಯರೆ
ಬಂಧು ಬಾಂಧವರೆ ಮಿತ್ರರೆ,

ಹಡೆದೊಡಲ ಸೀಳುವ ಸೀಳುನಾಯಿಗಳಿವರು
ದುಡಿದೊಡಲ ಹಿಂಡುವ ಕೊಲೆಗಡುಕರಿವರು
ಸೊರಗಿ ಸೊಪ್ಪಾಗಿ ಸೆರಗೊಡ್ಡಿದವರ
ಸೀರೆ ಬಿಚ್ಚುವ ಸೂಳೆಮಕ್ಕಳಿವರು
ಮೈಮುರಿದು ದುಡಿದಿಕ್ಕುವರ
ಮೂಳೆ ಮುರಿವ ರಾಕ್ಷಸರಿವರು
ಬೀಜ ಒಡೆದು ಬೀದಿಗೊಡಿಸುವ
ದಲಿತೋದ್ಧಾರಕರಿವರು.

ಅದಕ್ಕಾಗಿ ಎಚ್ಚರಿಕೆ ! ಅವರು
ಬರುವ ಮುಂಚೆ ಬಂದು ನಿಮ್ಮ
ಸೆರಗಿಗೆ ಕೈ ಇಕ್ಕುವ ಮುಂಚೆ
ಸಿದ್ಧವಾಗಿರಿ, ಸನ್ನದ್ಧರಾಗಿರಿ ಹಾರೆ
ಗುದ್ದಲಿ ಹಿಡಿದು, ಕೊಡಲಿ ಕುಡುಗೋಲು
ಮಚ್ಚುಗಳ ಹಿಡಿದು ರಕ್ತ
ಕುಡಿದವರ ರಕ್ತದೋಕುಳಿ
ಯಾಡುವ ಹಬ್ಬಕ್ಕೆ ಕಾಯುತ್ತಿರಿ.

—ಇಂದೂಧರ ಹೊನ್ನಾಪುರ

ವಿಶೇಷ ಲೇಖನ

ಯಾವ ಬದಲಾವಣೆಯೂ ಸಾಧ್ಯವಿಲ್ಲವೆಂದು ಪ್ರಚಾರ ಮಾಡುತ್ತಿದ್ದ. ಸ್ವಾಭಾವಿಕವಾಗಿ ಬಡಜನರ ನಾಯಕ ಭೂಸ್ವಾಮಿಗಳಿಗೆ ಭಯಂಕರ ಖಳನಾಯಕನಂತೆ ಕಂಡನು. ಚುನಾವಣೆಯ ದಿನ ಮತಗಟ್ಟೆಯೊಂದರಲ್ಲಿ ಅತಿದೊಡ್ಡ ಭೂಸ್ವಾಮಿ ನಾಕೂನಿಸಿಂಗ್ ಅಕ್ರಮ ನಡೆಸುವುದರ ವಿರುದ್ಧ, 'ಮೇಷ್ಟ್ರು' ಪ್ರತಿಭಟಿಸಿದಾಗ ಅವನನ್ನು ಚೆನ್ನಾಗಿ ಥಳಿಸಲಾಯಿತು. ಇದರಿಂದಾಗಿ ಆವನು ಆಸ್ಪತ್ರೆಯಲ್ಲಿ ಐದು ತಿಂಗಳಿರಬೇಕಾಯಿತು. ಆಸ್ಪತ್ರೆ ಬಿಡುವ ವೇಳೆಗೆ ನಕ್ಸಲ್‌ಬಾರಿಯಿಂದ ಸುದ್ದಿ ಹೊರ ಬರುತ್ತಿತ್ತು.

ಹಳ್ಳಿಗೆ ಹಿಂತಿರುಗಿದ ಮೇಷ್ಟ್ರು ದಲಿತರನ್ನು ಭೂಸ್ವಾಮಿಗಳೊಡನೆ ಇನ್ನೊಂದು ಹೋರಾಟಕ್ಕೆ ಸಿದ್ಧಗೊಳಿಸಿ, ಹೆಚ್ಚಿನ ಕೂಲಿಗಾಗಿ ಮುಷ್ಕರಕ್ಕಾಗಿ ಕರೆ ಕೊಟ್ಟ. ಕೆಲವು ದಿನಗಳ ನಂತರ ಭೂಸ್ವಾಮಿಗಳ ಕುತಂತ್ರದಿಂದಾಗಿ ಚಳುವಳಿ ವಿಫಲಗೊಂಡಿತು ನಂತರ ಮೇಷ್ಟ್ರನ್ನು ಬೆದರಿಸಲಾಯಿತು.

ಅಭೇದ್ಯ ಭೂಸ್ವಾಮಿಗಳು

ಏಕ್ವಾರಿಯ ಭೂಸ್ವಾಮಿಗಳು ಅಭೇದ್ಯರಂತೆ ಕಂಡುಬರುತ್ತಿದ್ದರು. ಸಂಖ್ಯೆಯಲ್ಲಿ ಕಮ್ಮಿ ಇದ್ದರೂ ಅವರ ಹತ್ತಿರ ನೂರಾರು ಲೈಸೆನ್ಸ್ ಇರುವ ಅಥವ ಇಲ್ಲದ ನಾಡ ಬಂದೂಕಗಳಿದ್ದುವು. ಸೋನ್ ಕಾಲುವೆ ಅವರ ಸಂಪತ್ತನ್ನು ಹೆಚ್ಚಿಸಿತ್ತು. ಅಧಿಕಾರಿಶಾಹಿಯ ಉನ್ನತ ಪದವಿಯಲ್ಲಿ ಅವರ ಮಕ್ಕಳಿದ್ದರು. ಜತೆಗೆ ವಿಧಾನಸಭೆಗಳಲ್ಲಿ ಅವರ ವಕ್ತಾರರು ಇದ್ದರು. ನೂರಾರು ವರ್ಷಗಳಿಂದ ಹಳ್ಳಿಯ ಬಹುಪಾಲು ಜಮೀನನ್ನು ಹೊಂದಿ ಅವರು ಬಹುಪಾಲು ಜನರನ್ನು ಗುಲಾಮರು ಅಥವ ಅರೆ ಗುಲಾಮರನ್ನಾಗಿ ಮಾಡಿಕೊಂಡಿದ್ದರು.

ನೀವು ಏಕ್ವಾರಿ ಹಳ್ಳಿಯ ಗುಲಾಮನಾಗಿರುವುದನ್ನು ಊಹಿಸಿಕೊಳ್ಳಿ. ಅಗ ಬಂದೂಕಿಗಾಗಿ ಕೈ ಚಾಚುವ ತೀವ್ರತೆಯನ್ನು ಅರ್ಥ ಮಾಡಿಕೊಳ್ಳುತ್ತೀರಿ. ನಿಮ್ಮನ್ನಾರೂ ಮನುಷ್ಯರೆಂದು ತಿಳಿಯುವುದಿಲ್ಲ. ಗುಲಾಮನಾಗಿ ಹುಟ್ಟಿದ ನಿಮ್ಮ ಜೀವನ ಗುದ್ದಲಿ ಕುಡುಗೋಲು ಮತ್ತು ಭೂಸ್ವಾಮಿಯ ಪಾದಗಳಿಗೆ ಬಿಗಿಯಲ್ಪಟ್ಟಿವೆ. ನೀವು ಉತ್ಪಾದಿಸಿದ ಪ್ರತಿಯೊಂದರ ಬಗ್ಗೆಯೂ ಭೂಸ್ವಾಮಿ ಬಡಾಯಿ ಕೊಚ್ಚಿಕೊಳ್ಳುತ್ತಾನೆ. ಆದರೆ ನಿಮ್ಮ ಮಕ್ಕಳು ಅಲ್ಯೂಮಿನಿಯಂ ತಟ್ಟೆಗಳ ತಮಟೆಯನ್ನು ಹೊಡೆಯುತ್ತಲೇ ಇರುತ್ತಾರೆ. ಪ್ರತಿದಿನ ಒಬ್ಬನಲ್ಲ ಒಬ್ಬ ಭೂಸ್ವಾಮಿ ನಿಮ್ಮ ಹೆಂಡತಿ ಮಗಳನ್ನು ಕೊಂಡೊಯ್ಯುತ್ತಿರುತ್ತಾನೆ. ನಿಮ್ಮ ಕೂಲಿ ಮಾಡುವ ಮಗಳು ಹೊಲದಲ್ಲಿ ಕಳಂಕಿತಳಾಗದಿದ್ದರೆ ರಾತ್ರೆ ಭೂಸ್ವಾಮಿಯ ಮಗ ಬಂದು ನಿಮ್ಮ ಮನೆಯಲ್ಲಿಯೇ ಅವಳ ಮೇಲೆ ಅತ್ಯಾಚಾರ ನಡೆಸುತ್ತಾನೆ. ನಿಮಗಿರುವ ಏಕೈಕಮಾರ್ಗ ಏನೂ ಗೊತ್ತಿಲ್ಲದಿರುವಂತೇ ಇರುವುದು ಹೀಗೆ ಎಲ್ಲಿಯವರೆಗೆ ಬದುಕಬೇಕೆಂದು ನೀವೇ ಪ್ರಶ್ನಿಸಿಕೊಳ್ಳಿ? ಇದೇನು ನನ್ನ ಹಣೆಬರಹವೇ?

ಹರಿಜನ ಸ್ಥಾನ

ಇಲ್ಲ! ಹಾಗೆನ್ನುವುದರ ಅರ್ಥ ನಕ್ಸಲ್‌ಬಾರಿ. ಮೇಷ್ಟ್ರು ಒಂದು ದಿನ ಹಿಂದೂ ಪುರಾಣವೊಂದನ್ನು ಸ್ಕೂಲಿಗೆ ತೆಗೆದುಕೊಂಡು ಹೋದರು ಅಲ್ಲಿ ತನ್ನ ಸಹ ಉಪಾಧ್ಯಾಯನಿಗೆ ಅದರಲ್ಲಿ ಬರೆದಿದ್ದ ಮನುಸ್ಮೃತಿಯೂ ಸಹ ಶೂದ್ರಸ್ತ್ರೀಯನ್ನು ಅವಮಾನಗೊಳಿಸುವುದನ್ನು ಖಂಡಿಸುತ್ತದೆ ಎಂದು ಬರೆದಿರುವುದನ್ನು ಓದಲು ಹೇಳಿದ ನಂತರ ಅಂಬೇಡ್ಕರ್‌ನನ್ನು ಓದಿ ಮೇಷ್ಟ್ರು ತಾನು ಪ್ರಾರಂಭಿಸಬೇಕಿರುವ ಹರಿಜನರ ಪತ್ರಿಕೆಗೆ ಸಹಾಯ ಮಾಡುವೆಯಾ ಎಂದು ಕೇಳಿದರು. 'ಹರಿಜನ ಸ್ಥಾನ' ಎಂಬ ಆ ಪತ್ರಿಕೆ ಗೆಲವು ಸಂಚಿಕೆಗಳ ನಂತರ ನಿಂತು ಹೋಯಿತು. ಒಂದು ಸಂಜೆ ಅರ್‍ರಾದ ಹರಿಜನರು 'ಹರಿಜನ ಸ್ಥಾನವನ್ನು ಸ್ಥಾಪಿಸುತ್ತೇವೆ ಎಂದು ಕೂಗುತ್ತಾ 'ಪಂಜಿನ' ಮೆರವಣಿಗೆ ನಡೆಸಿದರು. ಆ ಮೆರವಣಿಗೆಯ ನಾಯಕತ್ವ ವಹಿಸಿದ್ದು ಮೇಷ್ಟ್ರು. ಆಗ 1968.

ನಂತರ ಮೇಷ್ಟ್ರು ಲೆನಿನ್‌ನನ್ನು ಓದಲು ಪ್ರಾರಂಭಿಸಿದರು. ಕಲ್ಕತ್ತಾ ಸಿಲಗುರಿ, ಮಿದ್‌ನಾಪುರಗಳಿಂದ ಪತ್ರಿಕೆಗಳಿಂದ ಬರುತ್ತಿದ್ದ ಸುದ್ದಿಗಳನ್ನು ಓದುತ್ತಿದ್ದರು.

(ಮುಂದು ವರಿಯುವುದು)

ಹೋರಾಟದ ಬದುಕಿನ ಡಾ|| ಅಂಬೇಡ್ಕರ್

ಪ್ರತಿ ದೇಶದಲ್ಲೂ ಆರ್ಥಿಕ, ಸಾಮಾಜಿಕ ಅಸಮಾನತೆಗಳಿಂದ ಹಿಂದುಳಿದ ಜನ ಒಂದಲ್ಲ ಒಂದು ರೀತಿಯ ತುಳಿತಕ್ಕೊಳಪಟ್ಟಿದ್ದಾರೆ. ಇದು ಭಾರತಕ್ಕೇನು ಹೊರತಲ್ಲ.

ಭಾರತದಲ್ಲಿ ಅತಿ ಕ್ರೂರ ಹಿಂಸೆಗೆ ಒಳಗಾದವರು, ಒಳಗಾಗಿರುವವರು ದಲಿತರು ಎಂಬುದನ್ನು ಯಾವ ಮಾನವೀಯತೆ ಇರುವ ಮಗನೂ ಹೇಳುತ್ತಾನೆ. ದಿನವೂ ಅತ್ಯಾಚಾರ, ಅವಮಾನ, ಕೊಲೆ, ಸುಲಿಗೆಗೆ ತುತ್ತಾಗುತ್ತ ಮೂಕ ವೇದನೆಯನ್ನು ಅನುಭವಿಸುತ್ತ, ಸಿಟ್ಟು ಬಂದರೂ ಪ್ರತಿಭಟಿಸಲಾರದ ಅಸಹಾಯಕತೆಯಿಂದ ಉಸಿರಾಡುತ್ತಿದ್ದೂ, ಸತ್ತ ಬದುಕ ಬದುಕುತ್ತಿರುವ ದಲಿತ ಜನಾಂಗದಲ್ಲಿ ಹುಟ್ಟಿದ ಮೊಟ್ಟಮೊದಲ ಪ್ರತಿಭಟನಾ ಶಕ್ತಿ ಡಾ|| ಭೀಮರಾಂಜ ಅಂಬೇಡ್ಕರ್.

ಅಂಬೇಡ್ಕರ್‌ರು ಬಾಲ್ಯದಿಂದಲೂ ಅತಿಘೋರ ಯಾತನೆಯನ್ನು ಅನುಭವಿಸಿದರು. ಈಯಾತನೆಯ ನಡುವೆಯೂ ಅವರು ಹೆಚ್ಚು ವಿದ್ಯಾಭ್ಯಾಸ ಮಾಡಿ, ತನ್ನ ಜನಾಂಗದ ನೋವುಗಳು ನಿರಾಶೆಗಳು, ಎಲ್ಲವನ್ನು ಕಂಡು ಉಂಡು, ಇಂಥವೆಲ್ಲಕ್ಕೂ ಕಾರಣವಾಗಿರುವ ಹೇಯ ದಾರ್ಮಿಕ ಪ್ರಜ್ಞೆ, ಅಸಮಾನತೆಯಿಂದ ಕೂಡಿರುವ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಹೋರಾಟದಲ್ಲಿ ತೊಡಗಿದರು ಹೋರಾಟದ ಮೊದಲ ಹಂತವಾಗಿ ದಲಿತರು ಮತ್ತು ಬಡಕೂಲಿಕಾರರುಗಳ ಸಂಘಟನೆಯಲ್ಲಿ ತೊಡಗಿದರು. ಅಂಬೇಡ್ಕರ್ ಒಬ್ಬ ಮಹಾನ್ ಕಾರ್ಮಿಕ ನಾಯಕನೂ ಆಗಿದ್ದರು.

'ಸವರ್ಣೀಯರ ಮನಃಪರಿವರ್ತನೆಯಿಂದ ಅಸ್ಪೃಶ್ಯತೆಯ ನಿವಾರಣೆ ಸಾಧ್ಯ' ಎಂದು ತಿಳಿದಿದ್ದ ಗಾಂಧಿಜೀಯ ದೃಷ್ಟಿಯಲ್ಲಿ ಅಂಬೇಡ್ಕರ್ ಬದ್ಧ ವೈರಿಯಾಗಿ ಕಾಣಿಸಿಕೊಂಡರು.

ಬದುಕಿನ ಪ್ರತಿ ಹಂತ ಹಂತಗಳಲ್ಲೂ ಅಸ್ಪೃಶ್ಯತೆಯ ವಿರುದ್ಧ ಮಾನವೀಯ ಹಕ್ಕುಭಾಧ್ಯತೆಗಳಿಗಾಗಿ ಹೋರಾಡಿದರು. ಇದಕ್ಕೆ ದಲಿತರನ್ನು ಸಂಘಟಿಸಲು 'ಮೂಕನಾಯಕ' ಎಂಬ ಪತ್ರಿಕೆಯನ್ನು ಹೊರಡಿಸಿದರು. ಹಿಂದು ಧರ್ಮದ ಹೀನ ಕೃತ್ಯಗಳಿಂದ ದಲಿತ ಜನಾಂಗ ದಿಕ್ಕೆಟ್ಟು, ನಾನು ಹಿಂದುವಾಗಿ ಸಾಯುವುದಿಲ್ಲ ಎಂದು ಪಣತೊಟ್ಟು ಲಕ್ಷಾಂತರ ಸಹೋದ್ಯೋಗಿಗಳೊಂದಿಗೆ ಬಾಂಧವರೊಂದಿಗೆ, ಬೌದ್ಧಮತ ಅವಲಂಬಿಸಿದರು. ಈ ಮತಾಂತರದ ವೀರ ನಿರ್ಣಯಕ್ಕೆ ಹಿಂದೂ ದರ್ಮದ ಅಮಾನುಷ ರೀತಿ ನೀತಿಯೇ ಕಾರಣವಾಗಿತ್ತು.

ಈ ಪ್ರತಿಭಟನಾ ಶಕ್ತಿಯ ನೆರಳಲ್ಲಿ ಇಂದು ಅಲ್ಲಲ್ಲಿ ಹೋರಾಟದ ಸ್ವರವು ಇಣಕಿದರೂ ಬದುಕಿನ ಕರಾಳತೆ ಕಣ್ಕಟ್ಟುತ್ತಿದೆ.

---

* ಆಗ್ರಾ ಹರಿಜನರ ಮೇಲೆ ಪೋಲೀಸರು ಗುಂಡು ಹಾರಿಸುತ್ತಿದ್ದಾಗ ಉನ್ನತ ಪೋಲೀಸ್ ಅಧಿಕಾರಿಗಳಿಗೆಲ್ಲ ಸತ್ಕಾರ ಕೂಟವೊಂದರಲ್ಲಿ ತಲ್ಲೀನರಾಗಿದ್ದರಂತೆ.

—ದೀನದಲಿತ ರಕ್ಷಕರಾದ ಪೋಲೀಸರಿಗೆ ಜಯವಾಗಲಿ.

ಪುಸ್ತಕ ವಿಮರ್ಶೆ

ದಲಿತ ಕೈಪಿಡಿ : ಸೈದ್ಧಾಂತಿಕ ಗೊಂದಲಗಳು

ಇವತ್ತಿನ ದಿನಗಳಲ್ಲಿ ದಲಿತ ಸಂಘಟನೆಯ ವಿದ್ಯಾರ್ಥಿಗಳಿಗೆ ದಲಿತ ಕೈಪಿಡಿ ಉಪಯುಕ್ತವಾಗಿದೆ. ದಲಿತರನ್ನು ಕುರಿತ ಬಿಡಿ ಬಿಡಿ ಪಂಕ್ತಿಗಳು ಇಲ್ಲಿ ಸಂಕಲನಗೊಂಡಿವೆ. ಭಾವನಾತ್ಮಕವಾಗಿ ದಲಿತರು ಒಂದಾಗಲು ನೆರವಾಗುವ ಈ ಕೃತಿಯನ್ನು ಬರೆದವರು ತೆಲುಗಿನ ಪ್ರಸಿದ್ಧ ಕವಿಗಳಾದ ಬೋಯಿ ಭೀಮಣ್ಣನವರು. ಕರ್ನಾಟಕದ ದಲಿತ ಸಂಘಟನೆಯ ಮಾರ್ಗದರ್ಶಕರಾದ ಕೆ. ನಾರಾಯಣಸ್ವಾಮಿಯವರದು ಕನ್ನಡ ಅನುವಾದ. ಅನುವಾದದ ಬಗ್ಗೆ ಹೇಳುವಾಗ ಪ್ರಶಂಸೆಯ ಮಾತುಗಳನ್ನು ಬಿಟ್ಟು ಇನ್ನೇನನ್ನೂ ಹೇಳಲು ಆಗುವುದಿಲ್ಲ.

ಲೇಖಕರು ನೋವುಂಡು ಬರೆದಿರುವುದರಿಂದ ಈ ಬರವಣಿಗೆ ಪ್ರತಿಯೊಬ್ಬನ ಹೃದಯವನ್ನು ಕಲಕುತ್ತದೆ. ಹೇಳುವ ವಿಚಾರಗಳನ್ನು ಉಪಕಥೆ, ರೂಪಕಗಳ ಮೂಲಕ, ಸ್ವಂತ ಅನುಭವಗಳು, ಹೋಲಿಕೆಗಳೊಂದಿಗೆ ಹೇಳುತ್ತಾರೆ. ಹೀಗೇ ಹೇಳುತ್ತಾ ಜಾತಿವರ್ಣಗಳು 'ಭಾರತ ಮಾತೆಯ ಎದೆಯ ಮೇಲೆ ಧಗಧಗಿಸುವ ಕೆಂಡಗಳಾಗಿವೆ"-ಎನ್ನುತ್ತಾರೆ ತೂಕಡಿಸುವ ದಲಿತರನ್ನು ರೇಗಿಸುವ, ಸಂಘಟನೆಗಾಗಿ ಪ್ರಚೋದಿಸುವ ಈ ಕೃತಿ ದಲಿತ ಕಾವ್ಯದಂತೆ ಇದೆ. ಭೀಮಣ್ಣನವರ ಭಾವಪೂರ್ಣತೆಯೇ ಓದುಗನಿಗೂ ಬಂದು ಭಾವಜೀವಿಗಳಾದ ದಲಿತರು ಕಣ್ಣೀರು ಕೆಡಗುವ ಸಾಧ್ಯತೆಯೂ ಇದೆ. ಆದ್ದರಿಂದ ಲೇಖಕರಿಗೆ ಇರುವ ಸಂಕಟ ಮತ್ತು ದಲಿತರ ಮೇಲಿರುವ ಪ್ರೀತಿಯು ಮೆಚ್ಚತಕ್ಕ ಅಂಶವಾಗಿದೆ.

ವಿರೋಧಾಭಾಸ

ಆದರೆ ನನ್ನ ಆಕ್ಷೇಪ ಇರುವುದು ಕೃತಿಕಾರರ ವಿಚಾರ ಸರಣಿಯ ಬಗ್ಗೆ ಕೃತಿಯ ಉದ್ದಕ್ಕೂ ಕಂಡುಬರುವದೇನೆಂದರೆ ಇವರ ಆಲೋಚನೆಯಲ್ಲಿ ಒಕ್ಕತೆ ಇಲ್ಲದೆ ತಾವು ಹೇಳಿದ್ದನ್ನು ತಾವೇ ವಿರೋಧಿಸುತ್ತಾ ಹೋಗುವ ಗುಣ. ಇವರ ಆಲೋಚನೆಯ ವಿರೋಧಾಭಾಸಗಳಲ್ಲಿ ಕೆಲವನ್ನು ನೋಡಬಹುದು. (1) ಬೇರೆ ಜಾತಿಯ ಪ್ರಗತಿಪರರನ್ನು ಪ್ರೀತಿಸಬೇಕು ಎನ್ನುತ್ತಲೇ ಭಾರತೀಯ ಎಡಪಕ್ಷಗಳ ಬಗ್ಗೆ ಇವರ ಅಸಾಧ್ಯವಾದ ವಿರೋಧವೂ ವ್ಯಕ್ತವಾಗಿದೆ. (2) ದಲಿತರದು ಹೊಟ್ಟೆಬಟ್ಟೆಯ ಸಮಸ್ಯೆ ಎನ್ನುತ್ತಲೇ ಭಾರತದಲ್ಲಿ ಆಗಬೇಕಾರುವುದು ವರ್ಗ ಹೋರಾಟವಲ್ಲ ಜಾತಿ ಹೋರಾಟ ಎನ್ನುತ್ತಾರೆ. ಇನ್ನೊಂದು ಕಡೆ ಮಾನವರಲ್ಲಿ ಎರಡೇ ವರ್ಗಗಳು ಶ್ರಮಜೀವಿಗಳು ಮತ್ತು ಸೋಮಾರಿಗಳು ಎಂದು ಹೇಳುತ್ತಾರೆ. (3) ದಲಿತ ನೌಕರರು ತಮ್ಮ ಜನರನ್ನು ಮರೆಯಬಾರದು ಅವರಿಗಾಗಿ ಶ್ರಮಿಸಬೇಕು ಎಂದು ಹೇಳುವ ಭೀಮಣ್ಣನವರು ಇನ್ನೊಂದು ಕಡೆ "ಓ ಹರಿಜನ ಉದ್ಯೋಗಿ—ಒಂದು ಶಿಲ್ಪ ನೋಡಿ ಮೆಚ್ಚು! ಒಂದು ನಾಟ್ಯ ಪ್ರದರ್ಶನಕ್ಕೆ ಅಧ್ಯಕ್ಷತೆವಹಿಸು ನಿನ್ನ ಜನ್ಮ ಸಾರ್ಥಕವಾಗುತ್ತದೆ" ಎನ್ನುತ್ತಾರೆ.

ಒಳಗೋ ? ಹೊರಗೋ ?

ದಲಿತರು ಹೆಚ್ಚು ಹೆಚ್ಚಾಗಿ ಆಕಾಶವಾಣಿಯಲ್ಲಿ ಹಾಡಬೇಕು, ಇಂದಿರಾ ಸ್ಟೇಡಿಯಂನಲ್ಲಿ ಆಟ ಆಡಬೇಕು ಎಂದು ಇವರು ಹೇಳುತ್ತಾರೆ ಇದು ಪಕ್ಕಾ ಸುಧಾರಣಾವಾದೀ ಧೋರಣೆ ಆಗಿದೆ. ದಲಿತ ವಿರೋಧಿಯಾದ ಈ ಸಮಾಜ ವ್ಯವಸ್ಥೆ

(ಏಳನೇ ಪುಟಕ್ಕೆ)

ಸಿದ್ದಲಿಂಗಯ್ಯ

ಹಾರೋಕೊಪ್ಪ ದಲಿತರ ಮೇಲೆ ಹಲ್ಲೆ

ವರದಿ : ಮುನಿಯಲ್ಲಪ್ಪ

ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು ಕಸಬಾ ಹೋಬಳಿಯ ಹಾರೋಕೊಪ್ಪ ಹೇಳಿಕೊಳ್ಳುವಂತ ದೊಡ್ಡ ಊರೇನಲ್ಲ. ಅಲ್ಲಿ ಸುಮಾರು 50–60 ಹರಿಜನರ ಮನೆಗಳಿವೆ. ಇವರಲ್ಲಿ ಸುಮಾರು 20–25 ಜನ ಹರಿಜನ ಅಲ್ಪಸ್ವಲ್ಪ ಜಮೀನು ಇಟ್ಟುಕೊಂಡಿದ್ದಾರೆ. ಓದಿದ ಕೆಲವು ಯುವಕರು ಸರ್ಕಾರದ ಕೆಲಸಕ್ಕೆ ಸೇರಿಕೊಂಡಿದ್ದಾರೆ.

ಇಲ್ಲಿನ ಹರಿಜನರು ಎಲ್ಲ ಕಡೆಯಂತೆ ಊರಿನ ಹಬ್ಬ ಹರಿದಿನಗಳಲ್ಲಿ ಸಾವು ತಿಥಿ ಇತ್ಯಾದಿಗಳಲ್ಲಿ ತಮಟೆ ಬಡಿಯುತ್ತಿದ್ದರು. ಸತ್ತ ದನಗಳನ್ನು ಹೊತ್ತು [illegible] ಎಳೆಯುತ್ತಿ[illegible] ಸವರ್ಣೀಯರು ಅಸಹ್ಯ ಅಂತ ಬಿಟ್ಟ [illegible] ಹರಿಜನರಪಾಲಿಗೆ ಕಾದು ಕುಳಿತಿರುತ್ತಿದ್ದರು.

[illegible] ಜ್ಞಾನವಂತ ಯುವಕರು ಇದ [illegible] ದಲಿತರಿಗೂ ಬ್ಯಾಂಕ್ [illegible] ಮಾರ್ಗ ಸೂಚಿಸಿ[illegible] ಜನತಾ ಮನೆಗಳು [illegible] ದಲಿತರು ಸಂಪೂರ್ಣ ಬದ[illegible] ಹೊರುವುದು, [illegible] ತಮಟೆ ಬಡಿಯುತ್ತಿದ್ದು [illegible]

[illegible]ಗಳ ಗುಂಪು

[illegible] ಬಾಳಲು [illegible] ತರಿಗೆ [illegible] ಜಮೀನ್ದಾರ[illegible] ದಲಿತರನ್ನು [illegible] ಬಗ್ಗೆ [illegible]ಗಳ ಗುಂಪು [illegible]

[illegible] ದೌರ್ಜನ್ಯಗಳು [illegible] ಮೇಲೆ ಯಾವ ತರದ ದೌರ್ಜನ್ಯ ನಡೆಸಿದರೂ ಇವರ ರಕ್ಷಣೆಗಾಗಿ ಜಮೀನ್ದಾರರು ಸದಾಕಾಲ ಸಿದ್ಧರಾಗಿರುತ್ತಿದ್ದರು. ಗೂಂಡಾಗಳು ದಲಿತರು ಸಾಕಿದ್ದ ಸಾಲದ ಕುರಿಗಳನ್ನು ಅವರ ಕಣ್ಣೆದುರೇ ಎಳೆದ ಕೊಂಡು ಹೋಗಿ ಕಡಿದು ತಿಂದರು. ಮನೆಗಳ ಮೇಲೆ ಧಾಳಿ ಇಟ್ಟರು. ಹೆಂಗಸರು ನೀರಿಗೆ ಹೋಗುವಾಗ ಹೀನಾಯವಾಗಿ ಮಾತಾಡಿ ಹೆದರಿಸಿ ಹೊರಗೆ ಬರದಂತೆ ಮಾಡಿದರು ಕೆಲವರನ್ನು ಯದ್ವಾತದ್ವ ಬಡಿದರು.

ಬಾವಿಗೆ ಸಗಣಿ

ದಲಿತರು ಕುಡಿಯುವ ಬಾವಿಗಳಿಗೆ ಸಗಣಿ ಹಾಕಿದರು. ನೀರಿಲ್ಲದೆ ಬೇಸತ್ತ ದಲಿತರು ದೂರದಲ್ಲಿ ಹರಿಯುವ ಕೆರೆಯಿಂದ ನೀರು ತರ ತೊಡಗಿದರು. ಕೆಲವೇ ದಿನಗಳಲ್ಲಿ ಅದಕ್ಕೂ ಸಂಚಕಾರ ಬಂತು. ಈ ಬಗ್ಗೆ ಪೋಲೀಸರಿಗೆ ಕೊಟ್ಟ ದೂರುಗಳಿಗೆ ಯಾವ ಪ್ರತಿಕ್ರಿಯೆಯೂ ಬರಲಿಲ್ಲ.

ಪೋಲೀಸರು ಜಮೀನ್ದಾರರ ಕಡೆ ಇರುವುದರಿಂದ ಪ್ರೋತ್ಸಾಹಗೊಂಡ ಅವರು ದಲಿತರು ತಮ್ಮ ಹೊಲಗಳಲ್ಲಿ ಬೆಳೆದಿದ್ದ ಬೆಳೆಯನ್ನು ಕದ್ದೊಯ್ದರು ಹೊಲಗಳಲ್ಲಿ ಬರಿದಾದುವು. ಯಾರೂ ಕೇಳುವುದಿಲ್ಲ. ಹೇಳುವುದಿಲ್ಲ. ದಲಿತರ ಹಾಹಾಕಾರ ಪ್ರಾರಂಭವಾಗತೊಡಗಿದರು.

ಈಗಲೂ........

ಈಗಲೂ ಇಲ್ಲಿ ದಲಿತರ ಹೆಣ್ಣುಮಕ್ಕಳು ಧೈರ್ಯವಾಗಿ ಬೀದಿಯಲ್ಲಿ ತಿರುಗುವಂತಿಲ್ಲ. ಗೂಂಡಾಗಳು ಹಸಿದ ಚಿರತೆಗಳಂತೆ ಹೊಂಚು ಹಾಕುತ್ತಿರುತ್ತಾರೆ. ಅಪ್ಪಿ ತಪ್ಪಿ ಅವರ ಕ್ರೂರ ದೃಷ್ಟಿಗೆ ಬಿದ್ದರೆ ಗತಿ ಮುಗಿದಂತೆಯೇ. ದಲಿತರೆಲ್ಲ ಹೆದರಿ ಕಂಗಾಲಾಗಿದ್ದಾರೆ. ಜೀವನ ಪೂರ್ತಿ ಭಯ ಆವರಿಸಿದೆ. ಯಾವ ಸಮಯದಲ್ಲಿ ಏನೋ ಏತ್ತೋ ಅಂತ ರಾತ್ರಿ ವೇಳೆ ಸಹ ಸರಿಯಾಗಿ ನಿದ್ದೆ ಮಾಡುತ್ತಿಲ್ಲ.

(ಆರನೇ ಪುಟದಿಂದ)

ಯನ್ನು ಬದಲು ಮಾಡಲು ನಾವು ಶ್ರಮಿಸಬೇಕಾಗಿದೆಯೇ ಹೊರತು ವ್ಯವಸ್ಥೆಯ ಒಳಗೆ ಒಳ್ಳೊಳ್ಳೆ ಸ್ಥಾನವನ್ನು ಗಿಟ್ಟಿಸಿಕೊಳ್ಳಬೇಕು ಎನ್ನುವುದು ವ್ಯವಸ್ಥೆಯ ಪರವಾದ ನಡವಳಿಕೆ ಆಗುತ್ತದೆ. ದಲಿತರನ್ನು ಹೊಲೆಮಾದಿಗರು ಎಂದು ಕರೆಯುವುದು ನನಗೆ ಪ್ರಿಯ ಎನ್ನುವ ಲೇಖಕರು 'ಹರಿಜನ' ಎಂಬ ಹೆಸರೂ ಪ್ರಚಾರದಲ್ಲಿರುವುದರಿಂದ ಅದನ್ನೂ ಬಳಸುತ್ತೇನೆ ಎಂದಿದ್ದಾರೆ ಇವುಗಳೆಲ್ಲ ಲೇಖಕರಿಗೆ ಯಾವುದೇ ವಿಚಾರದಲ್ಲೂ ಒಮ್ಮತ ಇಲ್ಲದಿರುವುದನ್ನು ತೋರಿಸುತ್ತದೆ.

ಪುಸ್ತಕ ವಿಮರ್ಶೆ

ಜಾತಿಯಲ್ಲೆ ವರ್ಗ

"ಜಾತಿ ವರ್ಗಗಳ ಅಂತರ ಅರಿಯದ ಎಡಪಕ್ಷಗಳಲ್ಲಿ ವಿಪ್ಲವ ಧೋರಣೆ ಇಲ್ಲವೆಂದು ನಂಬಿ" ಎಂದು ದಲಿತರಿಗೆ ಉಪದೇಶ ಮಾಡುವ ಲೇಖಕರು ದಲಿತರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ ಎನಿಸುತ್ತದೆ. ಎಡಪಕ್ಷಗಳ ಮೇಲಿನ ಅವರ ವಿರೋಧ ಸಮಾಜದ ಒಟ್ಟು ಕ್ರಾಂತಿಯ ಬಗ್ಗೆ ಅವರಿಗಿರುವ ನಿರ್ಲಕ್ಷ್ಯವನ್ನು ತೋರಿಸುತ್ತದೆ. ಇದಕ್ಕೆಲ್ಲ ಕಾರಣವೆಂದರೆ ಇಲ್ಲಿನ ಅನೇಕ ಚಿಂತನೆಗಳು ಮಧ್ಯಮ ಮತ್ತು ಮೇಲು ವರ್ಗದ ದಲಿತರ ಚಿಂತನೆಗಳಾಗಿರುವುದು. ಆದ್ದರಿಂದಲೇ ದಲಿತರ ಸುಡುವ ಸಮಸ್ಯೆಗಳಾದ ಭೂಮಿ, ಕೂಲಿಯ ಬಗ್ಗೆ ತೀವ್ರವಾದ ಕಳವಳ ಕಾಣುವುದಿಲ್ಲ. ಮೇಲು ಜಾತಿಯ ಕೆಲಸಗಾರರು ಕೆಲವರು ಹರಿಜನರ ಮನೆಯಲ್ಲಿ ಪಾತ್ರೆ ತಿಕ್ಕುತ್ತಾರೆ. ಅವರಿಗೆ ತಮ್ಮ ಯಜಮಾನರು ಹರಿಜನ ಎಂದು ತಿಳಿದ ಕೂಡಲೇ ಹೊರಟುಹೋಗುತ್ತಾರೆ ಎಂದು ಭೀಮಣ್ಣನವರು ವ್ಯಥೆ ಪಡುವುದನ್ನು ಗಮನಿಸಿ ಅವರ ವರ್ಗವನ್ನು ಗುರುತಿಸಬಹುದು.

ಧರ್ಮದರ್ಶಿತ್ವ

ದಲಿತ ಕೈಪಿಡಿಯ ಇನ್ನೊಂದು ಮುಖ್ಯಗೊಂದಲ ಭೀಮಣ್ಣನವರಿಗೆ "ಧರ್ಮದರ್ಶಿತ್ವ" ಸಿದ್ಧಾಂತದ ಬಗ್ಗೆ ಇರುವ ನಂಬಿಕೆಯಾಗಿದೆ. ಇದನ್ನು ಟಾಲ್‌ಸ್ಟಾಯ್ ಬೋಧಿಸಿದ್ದು, ರಷ್ಯಾದಲ್ಲಿ ಇನ್ನೊಂದು ಹೆಸರಿನಲ್ಲಿ ಜಾರಿಗೆ ತರಲಾಗಿದೆಯೆಂದೂ, ಅದನ್ನೇ ಇಂಡಿಯಾದಲ್ಲಿ ಗಾಂಧಿಯವರು ಬೋಧಿಸಿದ್ದು, ಕಾಂಗ್ರೆಸ್ ಪಕ್ಷ ಜಾರಿಗೆ ತರಲಿಲ್ಲವೆಂದೂ ವಿಷಾದಿಸುತ್ತಾರೆ. ಆದರೆ ಇವರು ಇದೇ ಕೃತಿಯಲ್ಲಿ ಇನ್ನೊಂದು ಕಡೆ ನಾವು ಮಾರ್ಕ್ಸ್‌ವಾದದಲ್ಲಿನ ಕೊರತೆಗಳನ್ನು ನಿವಾರಿಸಿಕೊಂಡು ಬುದ್ಧ ಪ್ರಯೋಗಿಸಿ ತೋರಿಸಿದ ಅಂಬೇಡ್ಕರ್ ಸೂಚಿಸಿದ ಸರ್ವಮಾನವ ಸಮತಾ ಸಮಾಜವನ್ನು ಸ್ಥಾಪಿಸಬೇಕಾಗಿದೆ ಎನ್ನುತ್ತಾರೆ. ಹೀಗಾಗಿ ಲೇಖಕರು ಗೊಂದಲಕ್ಕೆ ಒಳಗಾಗಿರುವುದು ಎದ್ದು ಕಾಣುತ್ತದೆ.

ಇಷ್ಟಾದರೂ ಈ ದೇಶದ ದಲಿತರೆಲ್ಲ ಒಂದಾಗಬೇಕು. ಜಾತಿಪದ್ಧತಿಯ ವಿರುದ್ಧ ಹೋರಾಡಬೇಕು ಎಂಬ ನಿಲುವಿಗೆ ಈ ಕೃತಿಯಲ್ಲಿ ಭಾವನಾತ್ಮಕ ಬೆಂಬಲ ಸಿಗುತ್ತದೆ. ಇದೇ ಈ ಕೃತಿಯ ಉಪಯೋಗ. ಆದರೆ ಸಮಾಜದ ಒಟ್ಟು ಬಿಡುಗಡೆಯನ್ನು ಬಯಸುವ ಕ್ರಾಂತಿಕಾರಿ ದಲಿತರು ಇನ್ನೂ ಮುಂದಕ್ಕೆ ಹೋಗಿ ಯೋಚಿಸಬೇಕಾಗಿದೆ. ಮುಂದೆ ಮುಂದೆ ಹೆಜ್ಜೆ ಇಡಬೇಕಾಗಿದೆ.

ದಾಖಲೆಗಳು

* ೧೯೭೮ನೇ ಇಸವಿಯಿಂದ ದಿನ ಪತ್ರಿಕೆಗಳಲ್ಲಿ ಸಂಗ್ರಹಿಸಿದ ದಲಿತರ ಮೇಲಿನ ದೌರ್ಜನ್ಯಗಳು :
* ೨೮-೨-೭೮ ಶಿಡ್ಲಘಟ್ಟ, ಫೆ. ೨೬ರಂದು ಇಲ್ಲಿ ಜಯಘೋಷ ಮಾಡುತ್ತ ಹೊರಟ ಕಾಂಗ್ರೆಸ್ (ಐ) ಗುಂಪೊಂದು ಹರಿಜನರ ಮನೆಗಳ ಮೇಲೆ ಕಲ್ಲು ತೂರಿತು. ಹರಿಜನರು ಜನತಾಕ್ಕೆ ಓಟು ಹಾಕಿದ್ದು ಇದಕ್ಕೆ ಕಾರಣವೆನ್ನಲಾಗಿದೆ.
* ೨೬-೨-೭೮ ಮಧ್ಯಪ್ರದೇಶದಲ್ಲಿನ ಕೆಲವು ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿರುವ ಹರಿಜನರು ಕಳೆದ ೨೦ ವರ್ಷಗಳಿಂದ ಕೇವಲ ಮೂರರಿಂದ ಆರು ರೂ. ವೇತನ ಪಡೆಯುತ್ತಿದ್ದಾರೆ.
* ೨೮-೨-೮೮ ಕೋಲಾರ್ ಜಿಲ್ಲೆಯ ಶ್ರೀನಿವಾಸಪುರದಲ್ಲಿನ ಹರಿಜನರ ಗುಡಿಸಲುಗಳಿಗೆ ನೆರೆ ಊರಿನ ಉದ್ರಿಕ್ತ ಗುಂಪೊಂದು ಬೆಂಕಿ ಇಟ್ಟ ಪರಿಣಾಮವಾಗಿ ಇಬ್ಬರು ಜೀವಂತ ಬೆಂದು ಹೋದ ಅಮಾನುಷ ಘಟನೆ ವರದಿಯಾಗಿದೆ.
* ೨೮-೨-೭೮ ವಿಜಾಪುರ ಜಿಲ್ಲೆಯ ಮುಧೋಳ ತಾಲ್ಲೂಕಿನ ಭಂಟನೂರು ಗ್ರಾಮದಲ್ಲಿ ಹರಿಜನ ತರುಣನೊಬ್ಬನನ್ನು ಕೊಡಲಿಯಿಂದ ಹೊಡೆದು ತೀವ್ರ ಗಾಯಗೊಳಿಸಲಾಗಿದೆ.
* ೨೮-೪-೭೮ ಚಿಂತನಪಲ್ಲಿ ಪೋಲೀಸ್ ಠಾಣೆಗೆ ಸೇರಿದ ಗಂಗಗಡ್ಡಹಳ್ಳಿಯಲ್ಲಿ ೬೫ ವರ್ಷ ವಯಸ್ಸಿನ ಕೊರ್ರಾಡಾರಿ ಎಂಬ ಗಿರಿಜನ ವೃದ್ಧನನ್ನು ಕಳೆದ ಸೋಮವಾರ ನಾಲ್ವರು ದೊಣ್ಣೆಗಳಿಂದ ಹೊಡೆದು ಕೊಂದರೆಂದು ವರದಿಯಾಗಿದೆ.
* ೨೦-೪-೭೮ ಆಗ್ರಾದಲ್ಲಿ ಅಂಬೇಡ್ಕರ್ ದಿನಾಚರಣೆ ಅಂಗವಾಗಿ ಏ. ೧೪ ರಂದು ಮೆರವಣಿಗೆ ಮಾಡುತ್ತಿದ್ದ ಹರಿಜನರ ಮೇಲೆ ಕಲ್ಲು ತೂರಲಾಯಿತು.

ಕೊಂಡು ಓದಿರಿ :-

ಹಾದಿಬೀದಿಯ ಹಾಡುಗಳು

ಚಂದಾದಾರರಿಗೆ ಸೂಚನೆ

"ಪಂಚಮಕ್ಕೆ" ಹಣದ ಅಗತ್ಯ ಎಷ್ಟಿದೆ ಎಂಬುದನ್ನು ನಿಮಗೆ ವಿವರಿಸಿ ಹೇಳಬೇಕಾಗಿಲ್ಲ. ಚಂದಾ ಮುಗಿದಿರುವ ಸದಸ್ಯರು ಕೂಡಲೆ ಚಂದಾ ಕಳುಹಿಸಿ ಸಹಕರಿಸಿರಿ. ಚಂದಾ ನೀಡದವರಿಗೆ ಇನ್ನುಮುಂದೆ ಪತ್ರಿಕೆಯನ್ನು ಕಳುಹಿಸಲಾಗುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸುತ್ತೇವೆ.

—ಪಂಚಮ ಬಳಗ

ಪಂಚಮ

ಪಂಚಮ'ವು ಪ್ರಕಟಣೆಗಾಗಿ ದಲಿತರ ಸಮಸ್ಯೆಗಳನ್ನು ಕುರಿತ ವಿಚಾರಾತ್ಮಕ ಲೇಖನ ಕವನಗಳನ್ನು ಆಹ್ವಾನಿಸುತ್ತದೆ. ಲೇಖನ ಮಾಮೂಲಿ ಬಿಳೀ ಹಾಳೆಯಲ್ಲಿ ಒಂದು ಅಥವ ಎರಡು ಪುಟಕ್ಕೆ ಮೀರದಂತಿದ್ದು ಹಾಳೆಯ ಒಂದೇ ಮಗ್ಗುಲಿಗೆ ಸ್ಪಷ್ಟವಾಗಿ ಬರೆಯಲ್ಪಟ್ಟಿರಬೇಕು. ಲೇಖಕರ ವಿಳಾಸ ಸಹಿ ಹೊಂದದ ಲೇಖನಕ್ಕೆ ಪ್ರಕಟಣೆಯ ಅವಕಾಶವಿಲ್ಲ. ಕವನ ಆದಷ್ಟು ಚಿಕ್ಕದಿದ್ದರೆ ಒಳ್ಳೆಯದು.

—ಸಂಪಾದಕ

ಕಂಡದ್ದು ಕಂಡಂಗೆ

ದಲಿತರೂ ಪೋಲಿಸರೂ

ಮಟ ಮಟ ಮಧ್ಯಾಹ್ನ ಯಾರನ್ನೋ ನೋಡಲೆಂದು ಪೋಲೀಸ್ ಸ್ಟೇಷನ್‌ಗೆ ಹೋಗಿದ್ದೆ. ಹಳೇ ಕಾಲದ ಮನೆಯಾದ ಪೋಲೀಸ್ ಸ್ಟೇಷನ್ ಮುಂದೆ ಬೃಹದಾಕಾರದ ಅರಳಿ ಮರವೊಂದು ನಿಂತಿತ್ತು. ಹಿಂದೂಧರ್ಮದ ಮಹಾಜನತೆ ಅದರ ಸುತ್ತ ಒಂದು ಕಟಕಟೆ ಕಟ್ಟಿಸಿದ್ದರು. ಅದರ ಮೇಲೆ ಭಾರತೀಯನ ಥರ ಇರುವ ಮಾನವನೊಬ್ಬ ಕಾಲುಕೊಕ್ಕರಿಸಿಕೊಂಡು ಟವಲನ್ನು ತಲೆಯಡಿ ಇಟ್ಟು ಮಲಗಿದ್ದ. ಅವನ ಸುತ್ತ ಹತ್ತಾರು ಜನ ಅಪ್ಪಟ ಭಾರತೀಯರು ನಿಂತಿದ್ದರು.

ನಾನು ಹುಡುಕಿಕೊಂಡು ಬಂದಿದ್ದ ಗೆಳೆಯ ಬರುವುದು ಲೇಟಾಗುತ್ತದೆ ಅಂತ ತಿಳಿದಿದ್ದರಿಂದ ನಾನೂ ಅರಳಿಮರದ ನೆರಳನ್ನು ಆಶ್ರಯಿಸಿ ಅವರೆಲ್ಲ ಏನು ಮಾತಾಡುವರು ಅಂತ ಆಲಿಸ ತೊಡಗಿದೆ. ಅವರ ಮಾತುಗಳಿಂದ ಅವರೆಲ್ಲ ಹೊಲೆಯರು ಅಂತ ಗೊತ್ತಾಯಿತು.

ಸ್ವಲ್ಪ ಹೊತ್ತಾದ ಮೇಲೆ ಪೊದೆ ಮೀಸೆಯ ಕೆಂಗಣ್ಣಿನ ಭಾರತೀಯನೊಬ್ಬ ಅಲ್ಲಿಗೆ ಬಂದ. ಅವನು ಗುಂಪು ಗೂಡಿದ್ದ ಭಾರತೀಯರ ಕುರಿತು 'ಯಾವುರ್ರಲಾ' ಅಂತ ಕೇಳಿದನು. ಅವರೆಲ್ಲ ಕ್ಯಾತನಹಳ್ಳಿ ಅಂತ ಹೇಳಿ ಕೈಕಟ್ಟಿ ಇಲಿಗಳಂತೆ ಆಡತೊಡಗಿದರು. ಕೆಂಗಣ್ಣಿನ ಭಾರತೀಯ ಇದ್ದಕ್ಕಿದ್ದಂತೆ ಹಾವು ಮೆಟ್ಟಿದವನಂತಾಡಿ "ಏನ್ರಲೇ ನನ್ಮಕ್ಳ ಯಾರನ್ಕೇಳಿದಿರ ತಕ್ಕಲೇ ನೀವು ಹೋಗದು ನಿಮ್ಜಾತಿ ಯಾವ್ದು. ಅವರ ಜಾತಿ ಯಾವ್ದು. ಸೂಳೇಮಕ್ಳ ಎರಡ್ದಿನ ಲಾಕಪ್‌ನಲ್ಲಿ ಕೂಳೀರಿ ಗೊತ್ತಾಯ್ತದೆ" ಅಂದು ಎಲ್ಲರ ಮುಖವನ್ನು ದುರ ದುರ ನೋಡತೊಡಗಿದನು.

ಇವನು ಬಡವರ ದೀನ, ದಲಿತರ ರಕ್ಷಣೆಗಾಗಿ ಇರುವ ಭಾರತೀಯ ಪೋಲೀಸ್ ಪೇದೆ ಅಂತ ಕೂಡಲೇ ನನಗೆ ಅರ್ಥವಾಯಿತು. ಅಷ್ಟರಲ್ಲೇ ಅವನು 'ಯಾವನಲೇ ಕೊಂಟ' ಅಂತ ಘರ್ಜಿಸಿದನು. ಅರಳೀಮರದ ಕಟಕಟೆ ಮೇಲೆ ಕಾಲು ಕೊಕ್ಕರಿಸಿ ಮಲಗಿದ್ದ ಮಾನವನ ಬಾಯಿಂದ 'ನಾನು ಸಾ' ಅನ್ನುವ ಕೀರಲು ಧ್ವನಿಯೊಂದು ಹೊರಟಿತು. ಗಕ್ಕನೆ ಅತ್ತ ನಡೆದ ಪೋಲೀಸ್ ಪೇದೆ "ಎದ್ರೆ ಮೂರ್ತ್ತಂಡಾಯ್ತಿಯಾ ಬಡ್ಡಿಮಗ್ನೆ ಪಾಳ್ಳೆಗಾರ್ಕೆ ಮಾಡ್ತಿಲಾ'' ಅಂದವನೆ ಮುಂಗೈ ಮುಷ್ಟಿ ಮಾಡಿ ದಬ್ ಅಂತ ಅವನ ಬೆನ್ನಮೇಲೆ ಗುದ್ದಿದನು 'ಅಯ್ಯಪ್ಪ' ಅಂದ ಆ ಭಾರತೀಯನ ಬಾಯಿಂದ ಮತ್ತೆ ಮಾತು ಹೊರಡಲಿಲ್ಲ.

ನನಗೆ ತಡೆಯಲಾಗಲಿಲ್ಲ. ಏನು ಸಮಾಚಾರ ಅನ್ನುತ್ತ ಅಲ್ಲಿಗೆ ಹೋದೆ. "ನಿವ್ಯಾರ್ರೀ ಕೇಳಕ್ಕೆ ಸುಮ್ನೆ ನಿಮ್ಕೆಲ್ಸ ನೋಡ್ಕೊಂಡು ಹೋಗ್ರಿ'' ಅನ್ನುತ್ತ ಪೋಲೀಸನು ಸ್ಟೇಷನ್ನಿನೊಳಗಡೆ ಹೋದನು. ನಂತರ ಅಲ್ಲೇ ನಿಂತಿದ್ದ ಭಾರತೀಯರನ್ನು ಏನು ಎತ್ತ ಅಂತ ಕೇಳಿದೆ. ಗುಳಿಬಿದ್ದ ಕಣ್ಣಿನವನೊಬ್ಬ ಹೇಳಿದ್ದರ ಸಾರಾಂಶ ಇಷ್ಟು:

ಹೊಲೆಯರ ಹೈದ ಈರ ಊರಗೌಡರ ಮಗಳು ನಿಂಗಮ್ಮನನ್ನು ಮಡಗಿಕೊಂಡಿದ್ದ. ಅವಳೂ ಅವನೂ ಮದುವೆಯಾಗಕ್ಕೂ ತಯಾರಾಗಿದ್ದರು. ಇದು ಹೆಂಗೋ ಗೌಡರಿಗೆ ತಿಳಿಯಿತು. ಅಂದೇ ಗೌಡರು ದಂಡು ಕಟ್ಟಿ ಹೊಲಗೇರಿಗೆ ನುಗ್ಗಿದರು. ಅವರು ಇವರಿಗೆ ಇವರು ಅವರಿಗೆ ಹೊಡೆದರು. ಗೌಡರು ಹೊಲೆಯರ ಮೇಲೆ ಪೋಲೀಸ್ ಕಂಪ್ಲೆಂಟ್ ಕೊಟ್ಟಿದ್ದರು. ತಿಂಗಳು ಟೈಫಾಯಿಡ್‌ನಲ್ಲಿ ನರಳುತ್ತಿದ್ದ ಕೊಂಟನ ಹೆಸರೂ ಕಂಪ್ಲೆಂಟ್‌ನಲ್ಲಿ ಸೇರಿದ್ದರಿಂದ ಅವನೂ ಬಂದು ಅರಳೀ ಮರದ ಕೆಳಗೆ ಮಲಗಿದ್ದ.

ನಾನು ಅಸಹಾಯಕನಾಗಿ ನೋಡುತ್ತ ನಿಂತಿದ್ದೆ. ಹೆಚ್ಚು ಕಡಿಮೆ ಮಾತಾಡಿದ್ದರೆ ಪೋಲೀಸನು ಕೊಂಟನಿಗೆ ಕೊಟ್ಟ ಲಾತನ್ನ ನನಗೂ ಕೊಡುತ್ತಿದ್ದ. ಸ್ವಲ್ಪ ಹೊತ್ತಿನಲ್ಲೇ ಅವನು ಎಲ್ಲರನ್ನು ಕತ್ತಿಡಿದು ಲಾಕಪ್ಪಿನೊಳಕ್ಕೆ ಎಳೆದೊಯ್ದನು. ಅವರಾರೂ ಮಾತಾಡಲಿಲ್ಲ. ಪ್ರತಿಭಟಿಸಲಿಲ್ಲ. ಯಾವ ಅನ್ಯಾಯವನ್ನೂ ಮಾಡದ ಹೊಲೆಯರು ಎರಡು ದಿನ ಅಲ್ಲೇ ಇದ್ದರೆಂದು ನಂತರ ಗೊತ್ತಾಯಿತು.

—ಕಂಡವ

ಮೂರು ಘಟನೆಗಳು

* * *

ಹುಣಸೂರು ತಾಲ್ಲೂಕು ಬಿಳಿಕೆರೆ ಹೋಬಳಿ ಹಳ್ಳದ ಕೊಪ್ಪಲು ಗ್ರಾಮದಲ್ಲಿನ ಸಾರ್ವಜನಿಕ ಬಾವಿಯೊಂದರಲ್ಲಿ ನೀರು ತರಲು ಹೋಗುತ್ತಿದ್ದ ಹರಿಜನ ಬಸವಯ್ಯನವರ ಪತ್ನಿ ರಾಮಮ್ಮ ಅವರನ್ನು ಅದೇ ಊರಿನ ಪಟೇಲನ ತಮ್ಮ ಮರೀಗೌಡನ ಹೆಂಡತಿ ಪುಟ್ಟಲಕ್ಷ್ಮಮ್ಮ ಮತ್ತು ಆಕೆಯ ತಮ್ಮ ಗೋವಿಂದಗೌಡ ಎಂಬುವರು ಹೊಡೆದು ಕಳುಹಿಸಿದ್ದಾರೆ. ಅಲ್ಲದೆ ಗೋವಿಂದೇಗೌಡ ರಾಮಮ್ಮನನ್ನ ನಡುಬೀದಿಯಲ್ಲಿ ಮಾನಭಂಗ ಮಾಡುತ್ತೇನೆ ಎಂದು ಹೆದರಿಸಿದ್ದಾನೆ

* * *

ಇದೇ ತಾಲ್ಲೂಕಿನ ಚಿಕ್ಕಹಡಗನಹಳ್ಳಿಯಲ್ಲಿನ ಹರಿಜನರು ಸತ್ತ ದನ ಹೊರುವುದು, ನಾಯಿ ಎಳೆಯುವುದು ತಮಟೆ ಬಡಿಯುವುದು ಇತ್ಯಾದಿ ಹೀನ ಕೆಲಸಗಳನ್ನು ಮಾಡುವುದಿಲ್ಲ ಎಂದು ತಿಳಿಸಿದ್ದಕ್ಕಾಗಿ ಆ ಊರಿನ ಸವರ್ಣೀಯರು ಅವರಿಗೆ ಬಹಿಷ್ಕಾರ ಹಾಕಿದ್ದಾರೆ ಮತ್ತು ಸಾವಲಯ್ಯನ ಮಗ ಕೆಂಪಯ್ಯ ಎನ್ನುವವನನ್ನು ಹಿಡಿದು ಹೊಡೆದಿದ್ದಾರೆ. ಹರಿಜನರಿಗೆ ಅಂಗಡಿ, ಹೋಟೆಲ್‌ಗಳಿಗೆ ಪ್ರವೇಶ ನಿಷೇಧಿಸಿದ್ದಾರೆ ಜತೆಗೆ ಪ್ರಾಣಾಪಾಯದ ಬೆದರಿಕೆಯನ್ನು ಹಾಕಿದ್ದಾರೆ.

* * *

ಮೇಲಿನ ದೌರ್ಜನ್ಯ ಕುರಿತು ಹುಣಸೂರು ದಲಿತ ಸಂಘರ್ಷ ಸಮಿತಿ ಸಂಚಾಲಕ ಹರಿಹರ ಆನಂದಸ್ವಾಮಿ ಅವರು ಹುಣಸೂರಿನ ಗ್ರಾಮೀಣ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಲಕ್ಕಣ್ಣನವರ್ ಅವರಿಗೆ ದೂರು ನೀಡಲು ಹೋದಾಗ ಅವರು ಆನಂದಸ್ವಾಮಿ ಅವರನ್ನು ಹೀನಾಮಾನವಾಗಿ ಬೈದು 'ನಿನ್ನನ್ನು ಕೊಲೆ ಮಾಡಿಸುತ್ತೇನೆ' ಎಂದು ಬೆದರಿಕೆ ಹಾಕಿದ್ದಾರೆ.

ದೀನದಲಿತರ ರಕ್ಷಣೆಗಾಗಿ ಕಾರ್ಯನಿರ್ವಹಿಸಬೇಕಾಗಿರುವ ಪೋಲೀಸ್ ನೌಕರನೊಬ್ಬ ಹೀಗೆ ವರ್ತಿಸಿದ್ದರ ವಿರುದ್ಧ ಕೂಡಲೇ ಕ್ರಮ ತೆಗೆದುಕೊಳ್ಳಬೇಕು ಎಂದು ಸಂಬಂಧಪಟ್ಟವರಲ್ಲಿ 'ಪಂಚಮ' ಒತ್ತಾಯಿಸುತ್ತದೆ.

ಈ ಪತ್ರಿಕೆಯು ರಾಮದೇವರಾಕೆ ಅವರ ಸಂಪಾದಕತ್ವದಲ್ಲಿ, ಗೀತಾಂಜಲಿ ಮುದ್ರಣಾಲಯ, ಬೆಂಗಳೂರು–2 ಇಲ್ಲಿ ಮುದ್ರಿಸಲ್ಪಟ್ಟು ಅವರಿಂದಲೇ ಪ್ರಕಟಿಸಲ್ಪಟ್ಟಿತು.
ವಿಳಾಸ : 5–ಎ, ವಾಣಿ ವಾಣಿಜ್ಯ ವಿದ್ಯಾಶಾಲಾ, ಪತ್ರಕರ್ತರ ಕಾಲೋನಿ, ಬೆಂಗಳೂರು–560 002